

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119


ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 | Issue : 50 | Thursday 30-10-2025 | E-mail : maruti.b.hosamani76@gmail.com | Page: 4 | Price : Rs. 1/-

## ಬಂಜಾರ ಅಕಾಡೆಮಿಯ ಕ್ರೀಯಾಶೀಲ ಅಧ್ಯಕ್ಷರಾದ ಡಾ, ಎ.ಆರ್ ಗೋವಿಂದಸ್ವಾಮಿಯವರಿಗೆ ರುದ್ರಪ್ಪ ಲಮಾಣಿ ಪಟಾಲಮ್ ರಿಂದ ಅಡ್ಡಿ ಪಡಿಸುವಿಕೆ ಎಷ್ಟು ಸಮಂಜಸ ಸಾರ್ವಜನಿಕರ ಪ್ರಶ್ನೆಯಾಗಿದೆ...?





**ಸಿಹಿ ಕಹಿ ಸುದ್ದಿ,**
**ಬೆಂಗಳೂರು** : ಕರ್ನಾಟಕ ರಾಜ್ಯ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯ ಕ್ರಿಯಾಶೀಲ ಮತ್ತು ಪ್ರಾಮಾಣಿಕ ಅಧ್ಯಕ್ಷರಾದ ಡಾ, ಎ.ಆರ್ ಗೋವಿಂದಸ್ವಾಮಿ ಅವರ ಕರ್ತವ್ಯಗಳಿಗೆ ಅಡ್ಡಿಪಡಿಸಿ ಕರ್ನಾಟಕ ವಿಧಾನ ಸಭೆಯ ಉಪ ಸಭಾಧ್ಯಕ್ಷರಾದ ಶ್ರೀ ರುದ್ರಪ್ಪ ಲಮಾಣಿಯವರು ತೇಜೋವಧೆಗೆ ಪಿತೂರಿ ನಡೆಸುತ್ತಿರುವುದಾಗಿ ತಿಳಿದು ಬಂದಿದೆ. ರುದ್ರಪ್ಪ ಲಮಾಣಿಯವರು 07-02-2025 ರಂದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ಪತ್ರ ಬರೆದು (ಪತ್ರ ಸಂಖ್ಯೆ: ಕವಿಸ.ಉಸ. 1089/2025) ಹಿರಿಯ ಸಾಹಿತಿ ಶ್ರೀಮತಿ ಬಿ.ಟಿ ಲಲಿತಾನಾಯಕ್ ಅವರಿಗೆ ಸೇವಾಲಾಲ್ ಪ್ರಶಸ್ತಿ ಘೋಷಣೆ ಮಾಡಿರುವ ಕ್ರಮವನ್ನು ಖಂಡಿಸಿರುತ್ತಾ, ಮಾನ್ಯ ರುದ್ರಪ್ಪ ಲಮಾಣಿಯವರ ಹತ್ತಿರದ ಸಂಬಂಧಿಯೊಬ್ಬರಿಗೆ ಪ್ರಶಸ್ತಿ ನೀಡಬೇಕೆಂದು ಅಸಾಂವಿಧಾನಿಕವಾಗಿ ಒತ್ತಾಯಿಸಿರುತ್ತಾರೆ. ಅಕಾಡೆಮಿಯ ಅಧ್ಯಕ್ಷರು ಮತ್ತು ಸ್ಥಾಯಿ ಸಮಿತಿಯ ಸದಸ್ಯರು ಲಲಿತಾನಾಯಕ್ ಅವರನ್ನು ಆಯ್ಕೆ ಮಾಡಿ ಪತ್ರಿಕಾ ಪ್ರಕಟಣೆ ನೀಡಿದ ಬಳಿಕವೂ ಒತ್ತಾಯ ತಂದಿರುವುದು ಅಸಾಂವಿಧಾನಿಕ ನಡೆ ಯಾಗಿರುತ್ತದೆ. ಅಕಾಡೆಮಿ ರಿಜಿಸ್ಟ್ರಾರ್ ದಿನಾಂಕ 17.03.2025 ರಂದು ಮಾನ್ಯ ಉಪ ಸಭಾಪತಿಗಳಿಗೆ ಪತ್ರ ಬರೆದು, ಈಗಾಗಲೇ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಕೂಡ ಆಯೋಜಿಸಲಾಗಿದೆ ಎಂದು ಮನವರಿಕೆ ಮಾಡಿ ಕೊಟ್ಟಿದ್ದಾರೆ. ಹೀಗಿದ್ದರೂ ಶ್ರೀ ರುದ್ರಪ್ಪ ಲಮಾಣಿಯವರು, ಎ.ಆರ್ ಗೋವಿಂದಸ್ವಾಮಿ ಯವರಿಗೆ ದೂರವಾಣಿ ಕರೆ ಮಾಡಿ ವೈಯಕ್ತಿಕವಾಗಿ ನಿಂದಿಸಿರುತ್ತಾರೆ. "ನಾನೇ ಸರ್ಕಾರ ನಾನು ಹೇಳಿದಂತೆ ಕೇಳಬೇಕು ನನಗೆ ತಿಳಿಸದೆ ನನ್ನಲ್ಲಿ ಬಂದು ಚರ್ಚಿಸದೆ ಪ್ರಶಸ್ತಿ ಹೇಗೆ ನೀಡಿದಿರಿ?" ಎಂದು ಬೆದರಿಕೆ ಒಡ್ಡಿದ್ದಾರೆ. ರುದ್ರಪ್ಪ ಲಮಾಣಿಯವರ ಕಡೆಯ ಕೆಲವು ಪುಂಡರು ಗೋವಿಂದಸ್ವಾಮಿಯವರ ವಿರುದ್ಧ ಜೀವ ಬೆದರಿಕೆ ಹಾಕಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಹೀಗಾಗಿ ಗೋವಿಂದಸ್ವಾಮಿಯವರು ತನಗೆ ಪೋಲೀಸ್ ರಕ್ಷಣೆ ಒದಗಿಸಬೇಕೆಂದು ಕೋರಿ ಗೃಹ ಸಚಿವರಿಗೆ ಪತ್ರ ಬರೆದಿದ್ದಾರೆ. ರುದ್ರಪ್ಪ ಲಮಾಣಿಯವರ ಬೆಂಬಲಿಗ ಸದಸ್ಯರಾದ ಮೋತಿಲಾಲ್ ಚವ್ಹಾಣ್ ಹಾಗೂ ಇನ್ನೊಬ್ಬ ವ್ಯಕ್ತಿ ಅಕಾಡೆಮಿಯ ಕೆಲಸ ಕಾರ್ಯಗಳಿಗೆ ಅಸಹಕಾರ ತೋರಿಸುತ್ತಿದ್ದಾರೆ. ಲೆಕ್ಕಾಧಿಕಾರಿ ಶ್ರೀ ಸುರೇಶ್ ನಾಯಕ್ ಮತ್ತು ಪ್ರಭಾರ ರಿಜಿಸ್ಟ್ರಾರ್ ಆದ ಡಿ.ಎಂ ರವಿಕುಮಾರ್ ಅವರು ಕೂಡಾ ಅಕಾಡೆಮಿಯ ಕೆಲಸ ಕಾರ್ಯಗಳಲ್ಲಿ ಯಾವುದೇ ಸಹಕಾರ ನೀಡುತ್ತಿರಲಿಲ್ಲ. ರುದ್ರಪ್ಪ ಲಮಾಣಿಯವರು ಸದಸ್ಯರಿಗೆ ಅಮಿಷ ಒಡ್ಡಿ ತಮ್ಮತ್ತ ಸೆಳೆದು ಕೊಂಡಿದ್ದಾರೆ. ಹಾಗಾಗಿ ಅಕಾಡೆಮಿಯ ಕೆಲಸ ಕಾರ್ಯಗಳನ್ನು ಸರಿಯಾಗಿ ನಡೆಸಲಾಗುತ್ತಿಲ್ಲ ಎಂದು ತಿಳಿದು ಬಂದಿದೆ. ಕಾರ್ಯಕ್ರಮ ನಡೆಸದೆ, ಅಕಾಡೆಮಿ ಹಣ ಪೋಲು ಮಾಡಿದ್ದಾರೆ. ಲಮಾಣಿಯವರಿಂದ ಪ್ರಚೋದಿತರಾದ ಕೆಲವು ಸದಸ್ಯರು ಪ್ರಶಸ್ತಿಯನ್ನು ತಮ್ಮ ಸ್ವಂತ ಸಂಬಂಧಿಗಳಿಗೆ ಸುಳ್ಳು ಹೇಳಿ ಕೊಡಿಸಿ ಕೊಳ್ಳುವಲ್ಲಿ ಯಶಸ್ವಿ ಯಾಗಿದ್ದಾರೆ. ಇದನ್ನು ಖಂಡಿಸಿದ ಗೋವಿಂದ ಸ್ವಾಮಿಯವರ ವಿರುದ್ಧ ಶ್ರೀ ರುದ್ರಪ್ಪ ಲಮಾಣಿ ಜೊತೆ ಸೇರಿದ ಕೆಲವು ಸದಸ್ಯರು ದಿನಾಂಕ:17.06.2025 ರಂದು ಸುಳ್ಳು ಆರೋಪ ಹೊರಿಸಿ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಪತ್ರ ಬರೆದಿದ್ದಾರೆ. ಅಧ್ಯಕ್ಷರಾದ ಗೋವಿಂದ ಸ್ವಾಮಿಯವರಿಗೆ ವೈಯಕ್ತಿಕ ತೊಂದರೆ ಕೊಡಲು ಬಯಸಿದ ಮಾನ್ಯ ರುದ್ರಪ್ಪ ಅವರು, ಡಾ, ಎಂ.ವಿ ವೆಂಕಟೇಶ್ ಮತ್ತು ಕನ್ನಡ – ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಗಾಯತ್ರಿ ಅವರ ಮೂಲಕ ಸಂಚು ರೂಪಿಸಿ ಅಕಾಡೆಮಿಯಲ್ಲಿ ಕೆಲಸ ಮಾಡದಂತೆ, ಸಹಕಾರ ಸಿಗದಂತೆ ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ನಂತರ ದಿನಾಂಕ:30.5.2025 ರಲ್ಲಿ ಸಭಾಪತಿ ಯವರು ಟಿಪ್ಪಣಿಗಳನ್ನು ಕೊಟ್ಟು ಅಧ್ಯಕ್ಷರನ್ನು ಬದಲಿಸಲು ಸೂಚಿಸಿದ್ದಾರೆ. ಹೀಗಾಗಿ ಕಳೆದ ನಾಲ್ಕು ತಿಂಗಳುಗಳಿಂದ ರಿಜಿಸ್ಟ್ರಾರ್ ಕೂಡ ಅಕಾಡೆಮಿಗೆ ಬಾರದೆ ಅಕಾಡೆಮಿಯ ಕೆಲಸಗಳಿಗೆ ತೊಂದರೆ ಉಂಟಾಗಿದೆ. ಈ ಬಗ್ಗೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸಚಿವರಿಗೆ ಹಾಗೂ ಗೋವಿಂದ ಸ್ವಾಮಿ ಪತ್ರ ಬರೆದಿದ್ದಾರೆ. ಅಕಾಡೆಮಿಯ ಲೆಕ್ಕಾಧಿಕಾರಿ ಮತ್ತು ರಿಜಿಸ್ಟ್ರಾರ್ ಗಳ ಕಡೆಯವರಿಗೆ ಎಲ್ಲಾ ಕಾರ್ಯಕ್ರಮಗಳನ್ನು ನೀಡಬೇಕೆಂದು ಹಣ ಪಾವತಿಗೆ ಅಡಚಣೆ ಮಾಡುತ್ತಿದ್ದಾರೆ. ಕಲಾವಿದರಿಂದ ಸಂಘಗಳಿಂದ ಸಂಸ್ಥೆಗಳಿಂದ ಮಾಮೂಲು ವಸೂಲಿ ಕೂಡಾ ನಿರಂತರವಾಗಿ ನಡೆಯುತ್ತಿದೆ. ಇದಕ್ಕೆ ಕೆಲವು ಹಿರಿಯ ಅಧಿಕಾರಿಗಳು ಕೈಜೋಡಿಸಿದ್ದಾರೆ. ರಾಜ್ಯೋತ್ಸವ ಹಾಗೂ ಇತರೆ ಪ್ರಶಸ್ತಿಗಳಲ್ಲಿ ಕೂಡಾ ಪ್ರಬಲ ಸಮದಾಯಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಆಕ್ಷೇಪಿಸಿ ಗೋವಿಂದ ಸ್ವಾಮಿಯವರು ಇಲಾಖೆಯ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಬಂಜಾರ ಅಕಾಡೆಮಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಸಮುದಾಯದವರಲ್ಲಿ ಮಾಡಿರುವ ಉತ್ತಮ ಕೆಲಸಗಳಿಂದ ಅಕಾಡೆಮಿಗೆ, ಇಲಾಖೆಗೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬಂದಿದೆ. ಒಬ್ಬ ಸರ್ಕಾರಿ ನೌಕರರಾಗಿರುವ ಗೋವಿಂದಸ್ವಾಮಿ ಯಾವುದೇ ಗೌರದ ಧನ, ಸಂಭಾವನೆ ಮತ್ತು ಭತ್ಯೆ ಸ್ವೀಕರಿಸುತ್ತಿಲ್ಲ. ಇಲಾಖೆಯಿಂದ ಅನುಮತಿ ಪತ್ರ ಪಡೆದು ಅರ್ಧ ದಿನ ಇಲಾಖೆಯಲ್ಲಿ ಅರ್ಧ ದಿನ ಅಕಾಡೆಮಿಯಲ್ಲಿ ಗೌರವ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸ ಬೇಕೆಂದು ಮಾನ್ಯ ರುದ್ರಪ್ಪ ಲಮಾಣಿ ಅವರ ಒತ್ತಡದ ಮೇಲೆ ಸದಸ್ಯರನ್ನು ಕರೆಯಿಸಿ ಸಹಿ ಹಾಕಿಸುವುದು ತಿಳಿದು ಬಂದಿದೆ. ಇದರಿಂದ ಮನ ನೊಂದು ಸ್ವತಃ ಅಧ್ಯಕ್ಷರೇ ರಾಜಿನಾಮೆ ಕೊಡಲು ಮುಂದಾಗಿದ್ದರು ಎಂದು ವರದಿಯಾಗಿದೆ.

## ವೃತ್ತಿ ತರಬೇತಿ ಕೇಂದ್ರ ಕಾರ್ಯಕ್ರಮ ಉದ್ಘಾಟಿಸಿದ ಶಾಸಕನ ಪುತ್ರ ಶಿವರಾಜ ನಾಯಕ







**ಸಿಹಿ ಕಹಿ ಸುದ್ದಿ,**
**ಮಾನ್ವಿ** : ಕುಟುಂಬ ನಿರ್ವಹಣೆಯ ಜೊತೆಗೆ ಮಹಿಳೆಯರು ಹೊಲಿಗೆ ತರಬೇತಿ ಪಡೆದು ಆರ್ಥಿಕವಾಗಿ ಸಬಲರಾಗಬೇಕು ಎಂದು ಶಾಸಕ ಹಂಪಯ್ಯ ನಾಯಕ ಪುತ್ರ ಶಿವರಾಜ ನಾಯಕ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ತಾಲೂಕ ಪಂಚಾಯತಿ ಕಟ್ಟಡದಲ್ಲಿ ಸೇವಾ ಜನ ಶಿಕ್ಷಣ ಸಂಸ್ಥಾನ ಬುಡಕಟ್ಟು ಕೌಶಲ್ಯ ಕೇಂದ್ರ ರಾಯಚೂರು ಹಮ್ಮಿಕೊಂಡಿದ್ದ ವೃತ್ತಿ ಕೌಶಲ್ಯಗಳ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರಕಾರ ಪರಿಶಿಷ್ಟ ಪಂಗಡ ಇಲಾಖೆಯಿಂದ ಬುಡಕಟ್ಟು ಜನಾಂಗಕ್ಕಾಗಿ ಸರಕಾರ ನಾನಾ ಯೋಜನೆಗಳನ್ನು ಜಾರಿಗೆ ತಂದಿದೆ. ಪರಿಶಿಷ್ಟ ಪಂಗಡ ಜನಾಂಗದ ಮಹಿಳೆಯರು ತರಬೇತಿ ಪಡೆದು ಸಬಲರಾಗಬೇಕು ಎಂದು ಸಲಹೆ ನೀಡಿದರು.

ಪುರ ಸಭೆಯ ವಿರೋಧ ಪಕ್ಷದ ನಾಯಕ ರಾಜಾ ಮಹೇಂದ್ರನಾಯಕ ಮಾತನಾಡಿ, ಪರಿಶಿಷ್ಟ ಪಂಗಡದ ಜನಾಂಗಕ್ಕಾಗಿ ಸರಕಾರ ಯೋಜನೆ ಜಾರಿಗೆ ತಂದಿದೆ ಎಂದರೆ ನಮ್ಮ ಜನಾಂಗದ ಶ್ರೇಯೋಭಿವೃದ್ಧಿಗಾಗಿ. ಹೀಗಾಗಿ ಮಹಿಳೆಯರು ಸಬಲರಾಗುವುದರ ಜೊತೆಗೆ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಬೇಕು ಎಂದರು.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ**
**ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಹೋರಾಟಗಾರರಿಗೆ ಚನ್ನಮ್ಮ ಸ್ಫೂರ್ತಿ– ಗಂಗಾಧರ ದೇವರು



**ತೇರದಾಳ** : ದೇಶದ ಭದ್ರತೆಗಾಗಿ, ನಾಡು ನುಡಿ ನೆಲಕ್ಕಾಗಿ ಬ್ರಿಟಿಷರ ವಿರುದ್ಧ ನಿರಂತರ ಹೋರಾಟ ನಡೆಸಿದ ಕಿತ್ತೂರ ರಾಣಿ ಚನ್ನಮ್ಮ ಪ್ರತಿಯೊಬ್ಬ ಹೋರಾಟಗಾರರಿಗೆ ಸ್ಫೂರ್ತಿ ದಾಯಕಳಾಗಿದ್ದಾಳೆಂದು ಇಲ್ಲಿನ ಹಿರೇಮಠದ ಗಂಗಾಧರ ದೇವರು ಹೇಳಿದರು.

ಚನ್ನಮ್ಮ ಜಯಂತಿ ನಿಮಿತ್ಯವಾಗಿ ಹಿಡಕಲ್ ಪಂಚಮಸಾಲಿ ಸಮಾಜದವರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಸ್ತೆಯಲ್ಲಿರುವ ಚನ್ನಮ್ಮ ವೃತ್ತಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಚನ್ನಮ್ಮಳಂತಹ ಧೀರ ಹೋರಾಟಗಾರರ ಆದರ್ಶಗಳನ್ನು ಮಹಿಳೆಯರು ಜೀವನದಲ್ಲಿ ಅಳವಡಿಸಿಕೊಂಡು ಪ್ರತಿಯೊಂದು ಕ್ಷೇತ್ರದಲ್ಲಿ ಮುನ್ನಡೆಯುತ್ತಿರುವುದು ಹೆಮ್ಮೆಯ ಸಂಗತಿ ಎಂದು ಬಣ್ಣಿಸಿದರು.

ತಹಸೀಲ್ದಾರ್ ವಿಜಯಕುಮಾರ ಕಡಕೋಳ ಮಾತನಾಡಿ, ದೇಶ ಹಾಗೂ ಸಮಾಜ ನಮಗೆ ಏನು ನೀಡಿದೆ ಎನ್ನುವದಕ್ಕಿಂತಲೂ ನಾವು ಈ ನೆಲಕ್ಕಾಗಿ, ಈ ಸಮಾಜಕ್ಕಾಗಿ ಏನು ಕೊಡುಗೆ ನೀಡಿದ್ದೇವೆ ಎಂಬುದನ್ನು ಅವಲೋಕಿಸಬೇಕು. ಆವಾಗಲೇ ಈ ಭೂಮಿಯಲ್ಲಿ ಜನಿಸಿರುವುದಕ್ಕೆ ಸಾರ್ಥಕತೆ ದೊರೆಯಲು ಸಾಧ್ಯ ಎಂದು ಅಭಿಮತ ವ್ಯಕ್ತಪಡಿಸಿದರು.

ಸಮಾಜದ ಹಿರಿಯರಾದ ಪರಪ್ಪ ಕಾಲತಿಪ್ಪಿ, ಮಲ್ಲಪ್ಪ ಜಮಖಂಡಿ, ಚನ್ನಮಲ್ಲ ಮದಲಮಟ್ಟಿ,
ಈಶ್ವರ ಯಲ್ಲಟ್ಟಿ, ಅಲ್ಲಪ್ಪ ಮದಲಮಟ್ಟಿ, ಮುತ್ತಣ್ಣ ಮುಳ್ಳಟ್ಟಿ, ಮಹೇಶ ಕಾಲತಿಪ್ಪಿ, ಯಮನಪ್ಪ ಮುಕುಂದ, ಅರ್ಜುನ ಕ್ಯಾತಗೊಂಡ, ಸುರೇಶ ಮರಡಿ, ರಾಮಣ್ಣ ಹಿಡಕಲ್, ಡಾ. ಬಸವರಾಜ ಹಳೇಗೌಡರ, ಡಾ. ಪಾಟೀಲ, ಮಂಜುನಾಥ ಹಿರೇಮಠ, ಬಸವರಾಜ ಕಾಲತಿಪ್ಪಿ, ರೇವಣೇಶ ಮುಕುಂದ, ರವಿ ಸಲಬನ್ನವರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಕನ್ನಡದ ನಾಮಫಲಕ ಕಡ್ಡಾಯ – ಹಸನ್ ನಧಾಪ್ ಕರೆ ನೀಡಿದರು



**ಸಿಹಿ ಕಹಿ ಸುದ್ದಿ,**
**ದೇವರ ಹಿಪ್ಪರಗಿ** : ಪಟ್ಟಣದ ಅಂಗಡಿ, ಮುಂಗಟ್ಟು, ಮಳಿಗೆ, ಆಸ್ಪತ್ರೆ, ಕಚೇರಿ ಮೊದಲಾದವುಗಳ ಮೇಲೆ ಕಡ್ಡಾಯವಾಗಿ ಕನ್ನಡ ನಾಮ ಫಲಕವನ್ನು ಅಳವಡಿಸ ಬೇಕು, ಇಲ್ಲದಿದ್ದರೆ ಅನ್ಯಭಾಷಾ ಫಲಕಗಳಿಗೆ ಕಪ್ಪು ಮಸಿಯನ್ನು ಬಳಿಯ ಬೇಕಾಗುತ್ತದೆ ಎಂದು ತಾಲ್ಲೂಕಿನ ನಮ್ಮ ಕರ್ನಾಟಕ ಸೇನೆಯ ತಾಲೂಕು ಅಧ್ಯಕ್ಷ ಹಸನ್ ನದಾಫ್ ಪಟ್ಟಣದಲ್ಲಿ ಪತ್ರಿಕಾ ಗೋಷ್ಠಿ ನಡೆಸಿದರು. ನಾಮ ಫಲಕದಲ್ಲಿ ಶೇಕಡಾ 60% ರಷ್ಟು ಕನ್ನಡವನ್ನು ಬಳಸ ಬೇಕೆಂಬ ಸರ್ಕಾರದ ನಿಯಮ ವಿದ್ದರೂ ಕೂಡ ದೇವರ ಹಿಪ್ಪರಗಿ ಪಟ್ಟಣದಲ್ಲಿ ಪಾಲನೆ ಯಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬರುವ ನವೆಂಬರ್ 1 ರಂದು ರಾಜ್ಯೋತ್ಸವದ ಒಳಗೆ ನಾಮ ಫಲಕಗಳಲ್ಲಿ ಕನ್ನಡವನ್ನು ಬಳಸದಿದ್ದರೆ ಕಪ್ಪು ಮಸಿಯನ್ನು ಬಳೆಯುವ ಮೂಲಕ ನಮ್ಮ ಕರ್ನಾಟಕ ಸೇನೆಯ ಮೂಲಕ ತೀವ್ರ ಹೋರಾಟವನ್ನು ಮಾಡ ಬೇಕಾಗುತ್ತದೆ ಕೂಡಲೇ ಮಾನ್ಯ ತಾಲೂಕ ದಂಡಾಧಿಕಾರಿಗಳು ಪಟ್ಟಣದ ಅಂಗಡಿಗಳಿಗೆ ಹಾಕಿರುವ ಅನ್ಯ ಭಾಷಾ ನಾಮ ಫಲಗಳನ್ನು ತೆರವು ಗೊಳಿಸಬೇಕು ಎಂದು ಮನವಿ ಮಾಡಿದರು ಈ ಸಂದರ್ಭದಲ್ಲಿ ಸುನಿಲ್ ಕನಮಡಿ, ಹುಸೇನ್ ಕೊಕಟನೂರ, ದಾವಲ್ ಸಾಬ್ ಹೆಬ್ಬಾಳ, ಶಿವು ರೊಳ್ಳಿ, ಅಬ್ಬಾ ಸಲಿ ಆವೇರಿ, ಬೀರು ಹಳ್ಳಿ, ಪರಸು ನಾಯ್ಕೋಡಿ, ಹಮೀದ್ ಮುಲ್ಲಾ, ಅಬೂಬಕರ್, ಯಲಗಾರ , ನಬಿಲಾಲ ಚಿಕ್ ಸಿಂದಗಿ, ಶಿವನಗೌಡ ಮುಳಸಾವಳಗಿ, ಉಪಸಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ. ಹಚ್ಯಾಳ.ದೇವರ ಹಿಪ್ಪರಗಿ**

## ಕವಯಿತ್ರಿ ಕಮಲಾಕ್ಷಿ ಕೌಜಲಗಿ ಮತ್ತು ಸುರೇಶ್ ಕೌಜಲಗಿ ದಂಪತಿಗಳ ಅನನ್ಯ ಪರಿಸರ ಕಾಳಜಿ: 'ಪರಿಸರ ದೀಪಾವಳಿ' ಆಚರಣೆ

## "ಗಿಡ–ಮರಗಳೇ ನಮ್ಮೆಲ್ಲರ ಬೆಳಕು": ಚಿಂತಕ ಅಂಕಣಕಾರ ಮಣ್ಣೆ ಮೋಹನ್



**ನೆಲಮಂಗಲ** : 'ಪರಿಸರ ಮಾಲಿನ್ಯ, ಶಬ್ದ ಮಾಲಿನ್ಯಕ್ಕೆ ಕಾರಣವಾಗುವ ಹಾಗೂ ಅನೇಕರ ಆರೋಗ್ಯಕ್ಕೆ ಸಂಚಕಾರ ತರುವ ಪಟಾಕಿ ಸಿಡಿಸುವ ಬದಲಿಗೆ, ಗಿಡ–ಮರ ನೆಟ್ಟು ಪರಿಸರವನ್ನು ಉಳಿಸುವತ್ತ ಚಿತ್ತ ಹರಿಸೋಣ. ಏಕೆಂದರೆ ಗಿಡಮರಗಳೇ ವರ್ತಮಾನ ಮತ್ತು ಭವಿಷ್ಯದಲ್ಲಿ ನಮ್ಮೆಲ್ಲರ ಬೆಳಕು. ಕಪ್ಪೆ ಚಿಪ್ಪು, ಸ್ವಾತಿ ಮಳೆ ಹನಿಗಳಿಂದ ಸ್ವಾತಿ ಮುತ್ತನ್ನು ಸೃಷ್ಟಿಸುವಂತೆ, ನಾವೆಲ್ಲರೂ ಜ್ಞಾನದ ಹನಿಗಳಿಂದ ಜ್ಞಾನಿಗಳೆಂಬ ಮುತ್ತುಗಳಾಗೋಣ' ಎಂದು ಚಿಂತಕ ಅಂಕಣಕಾರ ಮಣ್ಣೆ ಮೋಹನ್ ತಿಳಿಸಿದರು. ಅವರು
ಶ್ರೀ ವನಕಲ್ಲು ಮಲ್ಲೇಶ್ವರ ಕ್ಷೇತ್ರದ 16ನೇ ತಿಂಗಳ ಶರಣ ಸಂಗಮ ಮತ್ತು ಗಿರಿ ಪ್ರದಕ್ಷಿಣೆ ಕಾರ್ಯಕ್ರಮ ಹಾಗೂ ಪರಿಸರ ದೀಪಾವಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಶರಣಸಂಗಮ'ದ ಪ್ರಯುಕ್ತ ಹಮ್ಮಿಕೊಂಡಿದ್ದ, 'ದಾಸ ಸಾಹಿತ್ಯ'ದ ಬಗ್ಗೆ ಪ್ರವಚನ ನೀಡಿದ, ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿದ್ದ ಡಾ. ಬಸವ ರಮಾನಂದ ಮಹಾ ಸ್ವಾಮೀಜಿಗಳು 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ, ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ ಎಂಬ ವಚನದ ತಾತ್ಪರ್ಯದಂತೆ, ಕರ್ನಾಟಕ ಸುಗಮ ಸಂಗೀತ ಕ್ಷೇತ್ರದ ಅಶ್ವಿನಿ ನಕ್ಷತ್ರಗಳಾದ ಪುರಂದರ ಮತ್ತು ಕನಕದಾಸರ ಕೀರ್ತನೆಗಳು ನಮ್ಮ ಅಂಧಕಾರಗಳನ್ನು ಹೋಗಲಾಡಿಸಲು ಅಪಾರವಾದ ಕೊಡುಗೆ ನೀಡಿವೆ.

ಈ ದೀಪಾವಳಿ ಹಬ್ಬದ ಸಡಗರದಲ್ಲಿ ನಾವೆಲ್ಲರೂ ಸಹ ಎಲ್ಲರ ಮನೆ ಮನದಂಗಳದಲ್ಲಿ ಜ್ಞಾನದ ದೀಪವನ್ನು ಬೆಳಗಬೇಕು'ಎಂದರು.

ಕವಯಿತ್ರಿ ಕಮಲಾಕ್ಷಿ ಕೌಜಲಗಿ ಮತ್ತು ಸುರೇಶ್ ಕೌಜಲಗಿ ದಂಪತಿಗಳು ಕೊಡುಗೆಯಾಗಿ ನೀಡಿದ ನೂರು ಮಸಾಲ ಸಸಿಗಳಲ್ಲಿ ನೆಡುವ ಮೂಲಕ, 'ಮಸಾಲ ಪದಾರ್ಥ ವನ' ವನ್ನು ನಿರ್ಮಿಸಲಾಯಿತು. ಈಗಾಗಲೇ ರೂಪುಗೊಂಡಿರುವ 'ಪುಷ್ಪ ವನ' ಮತ್ತು 'ಫಲ ವನ'ಗಳ ನಡುವೆ 'ಮಸಾಲ ಪದಾರ್ಥಗಳ ವನ' ನೆಲೆಯೂರಿದೆ. ಈ ಸಂದರ್ಭದಲ್ಲಿ ಮಾತನಾಡಿದ ದಂಪತಿಗಳು, ಪರಿಸರವನ್ನು ರಕ್ಷಿಸಲು ಕೈಜೋಡಿಸಬೇಕೆಂಬ ತುಡಿತ ಹಲವು ದಿನಗಳಿಂದ ಇತ್ತು. ಮಣ್ಣೆ ಮೋಹನ್ ಗುರುಗಳ ಕೃಪೆಯಿಂದ ಮತ್ತು ಸ್ವಾಮೀಜಿಗಳ ಆಶೀರ್ವಾದದಿಂದ ಇಂದು ನೆರವೇರಿತು.ಇದು ನಮ್ಮ ಅಳಿಲು ಸೇವೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಇಂತಹ ಸೇವೆಗಳಲ್ಲಿ ತೊಡಗಿಸಿಕೊಳ್ಳುವುದಾಗಿ ತಿಳಿಸಿದರು.

ಕವಯಿತ್ರಿಯರಾದ ಸುಮಲತಾ ಎಚ್ ಎನ್, ವೀಣಾ ವಿ ಬೇಗೂರು, ತೇಜಸ್ವಿನಿ, ಸ್ವಾತಿ, ಯುವಕವಿಗಳಾದ ರಾಮು, ಚೇತನ್ ರವರು ಗಿಡ ನೆಡುವ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡರು. ಹೆಣ್ಣು ಮಕ್ಕಳು ಸಹಾ ತಾವೇ ನೆಲ ಅಗಿದು ಗಿಡ ನೆಟ್ಟಿದ್ದು ವಿಶೇಷವಾಗಿತ್ತು.

ಸುಮಲತಾ ಎಚ್ ಎನ್, ವೀಣಾ ವಿ ಬೇಗೂರು ರವರು ವೇದಿಕೆಯಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡರು.

ವೇದಿಕೆ ಕಾರ್ಯಕ್ರಮದಲ್ಲಿ ಬಸವರಾಜು ಐನಾಪುರ, ಜಯಕುಮಾರ್, ಯೋಗನಂದ್, ಗುಬ್ಬಿ ಶಿವಣ್ಣ, ತಬಲವಾದ್ಯಕಾರ ಷಣ್ಮುಖ, ಚಂದ್ರಶೇಖರ್, ಮರಿಯಪ್ಪ, ಚನ್ನಬಸವ ದೇವರು, ಸಿದ್ದಲಿಂಗ ಸ್ವಾಮಿ, ಶಿವಲಿಂಗಮೂರ್ತಿ, ಶ್ರೀ ವನಕಲ್ಲು ಮಹಾಸಂಸ್ಥಾನದ ಟ್ರಸ್ಟಿಯ ಸರ್ವ ಸದಸ್ಯರು, ಸಮಸ್ತ ಭಕ್ತವೃಂದದವರು ಭಾಗವಹಿಸಿದ್ದರು.

## ಸ್ವಾತಂತ್ರ್ಯದ ಕಿಡಿಗಳು ಕೃತಿ ಲೋಕಾರ್ಪಣೆ

**ಬಾಗಲಕೋಟೆ** : ಮೂಡಲಮನೆ ಧಾರಾವಾಹಿ ಖ್ಯಾತಿಯ ಹೂಲಿ ಶೇಖರ ಅವರ ಸ್ವಾತಂತ್ರ್ಯದ ಕಿಡಿಗಳು ಕೃತಿ ಲೋಕಾರ್ಪಣೆ ಸಮಾರಂಭವು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಅಕ್ಟೋಬರ್ 26 ರಂದು ರವಿವಾರ ಬೆಳಿಗ್ಗೆ 10–30 ಕ್ಕೆ ನಡೆಯಲಿದೆ.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ ಹಾಗೂ ಆಕೃತಿ ಕನ್ನಡ ಪ್ರಕಾಶನ ಬೆಂಗಳೂರು ಇವರ ಸಹಯೋಗದಲ್ಲಿ ನಡೆಯುವ ಸಮಾರಂಭದಲ್ಲಿ ಹಿರಿಯ ನಾಟಕಕಾರ,
ಕಥೆಗಾರ, ಬೆಳಗಾವಿಯ ಜ್ಯೋತಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಉಪನ್ಯಾಸಕ ಡಾ. ಡಿ. ಎಸ್. ಚೌಗಲೆ ಕೃತಿ ಬಿಡುಗಡೆ ಮಾಡುವರು.

ಹಿರಿಯ ಸಾಹಿತಿ ಧಾರವಾಡದ ಡಾ. ಬಸು ಬೇವಿನಗಿಡದ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಬಾಗಲಕೋಟೆ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸುವರು.

ಹಿರಿಯ ಸಾಹಿತಿ ಡಾ. ವೈ ಎಂ. ಯಾಕೊಳ್ಳಿ, ಡಾ. ಚಂದ್ರಶೇಖರ್ ಹೆಗಡೆ ಕೃತಿ ಪರಿಚಯಿಸುವರು.

ಹೂಲಿ ಶೇಖರ ಹಾಗೂ ಶಾಲಿನಿ ಪ್ರದೀಪ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರೆಂದು ಪ್ರಕಟನೆ ತಿಳಿಸಿದೆ.

## ಪಂಚಮಸಾಲಿ ಸಮಾಜದಿಂದ ಚೆನ್ನಮ್ಮಳ ಜಯಂತಿ ಆಚರಣೆ

**ಮಹಾಲಿಂಗಪುರ** : ಪಟ್ಟಣದ ಚೆನ್ನಮ್ಮ ವೃತ್ತದಲ್ಲಿ ಪಂಚಮಸಾಲಿ ಸಮಾಜದಿಂದ ಗುರುವಾರ ವೀರರಾಣಿ ಕಿತ್ತೂರ ಚನ್ನಮ್ಮಳ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ, ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಚೆನ್ನಮ್ಮಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಪುರಸಭೆ ಉಪಾಧ್ಯಕ್ಷೆ ಶೀಲಾಭಾವಿಕಟ್ಟಿ, ಮುಖ್ಯಾಧಿಕಾರಿ ಈರಣ್ಣ ದಡ್ಡಿ ಚೆನ್ನಮ್ಮಳ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಪುರಸಭೆ ಸದಸ್ಯರಾದ ಬಸವರಾಜ ಯರಗಟ್ಟಿ, ಶೇಖರ ಅಂಗಡಿ, ಸಮಾಜದ ಹಿರಿಯರಾದ ಡಾ. ಎ. ಆರ್. ಬೆಳಗಲಿ, ಮುತ್ತಪ್ಪ ದಲಾಲ, ಶ್ರೀಶೈಲಪ್ಪ ಉಳ್ಳಾಗಡ್ಡಿ, ಸಿದ್ದುಗೌಡ ಪಾಟೀಲ, ಚಂದ್ರು ಗೊಂದಿ, ಹಣಮಂತ ಶಿರೋಳ,
ಚನ್ನಪ್ಪ ಪಟ್ಟಣಶೆಟ್ಟಿ, ಈರಪ್ಪ ದಿನ್ನಿಮನಿ, ಮಹಾಲಿಂಗಪ್ಪ ಕಂಠಿ, ಆನಂದ ಖೋತ, ಚಂದ್ರಶೇಖರ ಅಪ್ಪಗಿ, ವಿಜಯಕುಮಾರ ಕುಳಲಿ, ಸಂತೋಷ ಹುದ್ದಾರ, ಬಸವರಾಜ ಕೊಪ್ಪದ,
ಬಸವರಾಜ ದಲಾಲ, ಪ್ರಶಾಂತ ಹುದ್ದಾರ, ಹಣಮಂತ ಯರಗಟ್ಟಿ, ಪಂಡಿತ ಖೋತ, ಶಂಕರಗೌಡ ಪಾಟೀಲ, ಬಸು ಮಡಿವಾಳರ ಸೇರಿದಂತೆ ಇನ್ನೂ ಹಲವರು ಪಾಲ್ಗೊಂಡಿದ್ದರು.

# ದೀಪ ಬೆಳಗಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ದತ್ತು ಪಡೆದ ನಿರಾಣಿ ಫೌಂಡೇಶನ್



**ಮುಧೋಳ :** ಜಿಲ್ಲೆಯ ಸುಮಾರು ಒಂದು ನೂರು ಬಡ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಎಂ.ಆರ್. ಎನ್. ನಿರಾಣಿ ಫೌಂಡೇಶನ್ನಿನ ಅಡಿಯಲ್ಲಿ ದತ್ತಕ ಪಡೆದು ಅವರೆಲ್ಲರ ಸರ್ವತೋಮುಖ ಶ್ರೇಯೋಭಿವೃದ್ಧಿಗಾಗಿ ಹಾಗೂ ಅವರ ಬಾಳಿಗೆ ಬೆಳಕಾಗುವ ಹಿತದೃಷ್ಟಿಯಿಂದ "ಜ್ಞಾನ ಸಂಜೀವಿನಿ" ಸ್ಥಾಪಿಸಲಾಗಿದೆ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕ ಸಂಗಮೇಶ ನಿರಾಣಿ ಅವರು ತಿಳಿಸಿದರು.

ತನ್ಮೂಲಕ ಬೆಳಕಿನ ಹಬ್ಬ ದೀಪಾವಳಿಯನ್ನು ನಿರಾಣಿ ಪರಿವಾರ ಅರ್ಥಪೂರ್ಣವಾಗಿ ಆಚರಿಸಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಈಗ ಪ್ರಾಯೋಗಿಕವಾಗಿ ನೂರು ವಿದ್ಯಾರ್ಥಿಗಳ ಎಲ್ಲ ಶೈಕ್ಷಣಿಕ ವೆಚ್ಚವನ್ನು ಭರಿಸಲಾಗುವುದು. ಮುಂದೆ ಇದನ್ನು ವಿಸ್ತರಿಸಿ ಇನ್ನೂ ಹೆಚ್ಚೆಚ್ಚು ಬಡ ಪ್ರತಿಭಾವಂತ ವಿದ್ಯಾಥಿ9ಗಳಿಗೆ ಹೆಚ್ಚಿನ ವ್ಯಾಸಂಗಕ್ಕಾಗಿ ಎಲ್ಲ ಅಗತ್ಯತೆಗಳನ್ನು ಪೂರೈಸಿ ಅವರ ಬಾಳು ಬಂಗಾರ ಮಾಡುವ ಗುರಿ ನಿರಾಣಿ ಫೌಂಡೇಶನ್ ಹೊಂದಿದೆ ಎಂದು ಅವರು ವಿವರಿಸಿದರು. ಈಗಾಗಲೆ ಫೌಂಡೇಶನ್ನಿನ ಅಡಿಯಲ್ಲಿ ಅನೇಕ ಆರೋಗ್ಯ ಶಿಬಿರಗಳು, ನೇತ್ರ ಚಿಕಿತ್ಸಾ ಶಿಬಿರಗಳು, ಇನ್ನಿತರ ಸಮಾಜಮುಖಿ ಕಾರ್ಯಗಳು ಯಶಸ್ವಿಯಾಗಿ ನಡೆದಿವೆ ಎಂದು ಅವರು ವಿವರಿಸಿದರು.

ವಿದ್ಯಾರ್ಥಿಗಳ ದತ್ತು ಪಡೆಯುವ ಯೋಜನೆಯ ಭಾಗವಾಗಿ ನಗರದ ಸರ್ಕಾರಿ ಶಾಲೆಗಳ ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳ ಮನೆಗಳಲ್ಲಿ ದೀಪ ಬೆಳಗಿಸಿ, ಸಿಹಿ ಹಂಚಿ ಮತ್ತು ವಿದ್ಯಾರ್ಜನೆಗೆ ಅಗತ್ಯವಿರುವ ವಸ್ತುಗಳನ್ನು ನೀಡುವ ಮೂಲಕ ತೇಜಸ್ ಸಂಗಮೇಶ ನಿರಾಣಿ ಹಾಗೂ ಶ್ರೇಯಸ್ ಸಂಗಮೇಶ ನಿರಾಣಿಯವರು ದೀಪಾವಳಿ ಹಬ್ಬವನ್ನು ಸಂಭ್ರಮದಿಂದ ಆಚ–'ರಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ರಾಜೇಂದ್ರ ಟಂಕಸಾಲಿ, ಸೋಮು ಗೋಸಾರ, ಡಿ. ಎಚ್. ಶಿರೋಳ, ನಾರಾಯಣ ಕದಮ್, ಅಶೋಕ ಕುಳಲಿ,ಬಸುಮಾನೆ,ಬಸುದಾಸರ, ರಾಜು ಬಿಸರಡ್ಡಿ, ಬಸವರಾಜ ಮಹಾಲಿಂಗೇಶ್ವರಮಠ, ಗಿರೀಶ ಆನಿಖಿಂಡಿ ಮುಂತಾದವರು ಭಾಗವಹಿಸಿದ್ದರು.

# ಉಚಿತ ತರಬೇತಿಗೆ ಅರ್ಜಿ ಆಹ್ವಾನ

**ಬಾಗಲಕೋಟೆ :** ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟ್ ಸಂಸ್ಥೆ (ರಿ), ಹಳಿಯಾಳದಲ್ಲಿ 18 ರಿಂದ 50 ವಯಸ್ಸಿನ ಗ್ರಾಮೀಣ ಭಾಗದ ನಿರುದ್ಯೋಗ ಯುವಕ/ ಯುವತಿಯರಿಗಾಗಿ ನವೆಂಬರ್ ತಿಂಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಕೆ, ದುರಸ್ತಿ ಹಾಗೂ ಫಾಸ್ಟ ಫುಡ್ ಸ್ಟಾಲ್ ಉದ್ಯಮಿ ಉಚಿತ ತರಬೇತಿಗಳನ್ನು ಪ್ರಾರಂಭಿಸುತ್ತಿದೆ. ತರಬೇತಿಗಳು ಊಟ ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿದ್ದು, ಮೊದಲು ಬಂದವ–ರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುವುದು.

ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸಗಳನ್ನು ನೊಂದಾಯಿಸಲು ನವೆಂಬರ್ 05 ಕೊನೆಯ ದಿನವಾಗಿದ್ದು, ಆಸಕ್ತರು ಸಂಸ್ಥೆಯ ದೂರವಾಣಿ ಸಂಖ್ಯೆಗೆ ಸಂಪರ್ಕಿಸುವ ಅಥವಾ ಆನ್‌ಲೈನ ಮೂಲಕ (www. rsetihaliyal.org )ಅರ್ಜಿ ಸಲ್ಲಿಸಬಹುದು.

ತರಬೇತಿಯಲ್ಲಿ ಭಾಗವಹಿಸಲು ಆಸಕ್ತರು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ. ಸಂಸ್ಥೆಯ ದೂರವಾಣಿ ಸಂಖ್ಯೆ: 8217236973, 9483485489, 9482188780 ಸಂಪರ್ಕಿಸಲು ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.

# ಕಪ್ಪಲಗುದ್ದಿ ಗ್ರಾಮದಲ್ಲಿ ದಾಸ ಶ್ರೇಷ್ಠ ಸಂತ ಕನಕದಾಸರ ಕಂಚಿನ ಮೂರ್ತಿ ಲೋಕಾರ್ಪಣೆ ಗೊಸಿದ ಸಚಿವ ಜಾರಕಿಹೊಳಿ. ಡಾ ಯತಿಂದ್ರ ಸಿದ್ದರಾಮಯ್ಯ



**ಹಳ್ಳೂರ:** ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕಪ್ಪಲಗುದ್ದಿ ಗ್ರಾಮದಲ್ಲಿ ದಾಸ ಶ್ರೇಷ್ಠಶ್ರೀ ಕನಕದಾಸರ ನೂತನವಾಗಿ ಕಂಚಿನ ಮೂರ್ತಿಯನ್ನು ಉದ್ಘಾಟನೆ ನೆರವೇರಿಸಿ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ ನಮ್ಮ ತಂದೆ ರಾಜಕೀಯದ ಕೊನೆಯ ಘಟ್ಟದಲ್ಲಿದ್ದಾರೆ" ವೈಚಾರಿಕವಾಗಿ, ಪ್ರಗತಿಪರವಾದ ಸಿದ್ಧಾಂತ ಇಟ್ಟುಕೊಂಡಿರುವ ಅವರಿಗೆ ಮಾರ್ಗದರ್ಶನ ನೀಡಲು ನಾಯಕರು ಬೇಕು. ಆ ಜವಾಬ್ದಾರಿಯನ್ನು ಸಚಿವ ಸತೀಶ್ ಜಾರಕಿಹೊಳಿ ವಹಿಸಿಕೊಳ್ಳುತ್ತಾರೆ. ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳ ಮೇಲೆ ನಂಬಿಕೆ ಇಟ್ಟುಕೊಂಡಿರುವ ಎಲ್ಲ ರಾಜಕಾರಣಿಗಳಿಗೆ, ಯುವಕರಿಗೆ ಅವರು ಮಾದರಿಯಾಗಿ ನಮ್ಮನ್ನೆಲ್ಲ ಮುನ್ನಡೆಸಿಕೊಂಡು ಹೋಗುವ ನಂಬಿಕೆ ನನಗಿದೆ" ಎಂದರು.

ಈ ರೀತಿಯ ತತ್ವಬದ್ಧತೆ ಇರುವ ನಾಯಕರು ಸಿಗುವುದು ಬಹಳ ಕಷ್ಟ. ಆದರೆ ಅಂತಹ ಕೆಲಸವನ್ನು ಜಾರಕಿಹೊಳಿ ಅವರು ಮಾಡುತ್ತಿದ್ದಾರೆ. ಇದನ್ನು ಹೀಗೆಯೇ ಮುಂದುವರೆಸಲಿ" ಎಂದು ಆಶಿಸಿದರು.

ರಾಜ್ಯ ರಾಜಕೀಯದಲ್ಲಿ ಈಗಾಗಲೇ ನವೆಂಬರ್ ಕ್ರಾಂತಿಯ ಚರ್ಚೆಗಳು ಜೋರಾಗಿ ನಡೆಯುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕುರ್ಚಿ ಕಳೆದುಕೊಳ್ಳಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಈ ನಡುವೆ ಸಿದ್ದರಾಮಯ್ಯನವರ ಅವರ ಪುತ್ರ ಡಾ.ಯತೀಂದ್ರ ಅವರು ನೀಡಿರುವ ಹೇಳಿಕೆ ರಾಜಕೀಯ ವಲಯದಲ್ಲಿ ಸಂಚಲನ ಉಂಟುಮಾಡಿದೆ.

ಲೋಕೋಪಯೋಗಿ ಇಲಾಖೆ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಮಾತನಾಡಿ ಬಸವಣ್ಣನವರ,ಕನಕದಾಸರಂತಹಮಹಾನ ಮೇಧಾವಿಗಳಪುತ್ಥಳಿನಿರ್ಮಾನವಾಗಿಅವರ ತತ್ವ ಆದರ್ಶಗಳನ್ನು ಯುವ ಪೀಳಿಗೆಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಯಾರು ಮೇಲು ಕೀಳು ಎಂಬ ಬೇಧ ಭಾವ ಮಾಡದೆ ಎಲ್ಲರನ್ನು ಸರಿ ಸಮನಾಗಿ ಕಾಣಬೇಕು. ಜಾತಿ ಗಣತಿ ನಿಮ್ಮ ಸ್ಥಿತಿ ಗತಿ ತಿಳಿದು ಬಡವರನ್ನು ಶ್ರೀಮಂತರಾಗಿಸುವ ಉದ್ದೇಶವಾಗಿದೆ. ನಾವು ಮಾತು ಕೊಟ್ಟಂತೆ ರೈತರಿಗೆ ಕೃಷಿ ಗೆ ಅನುಕೂಲವಾಗುವಂತೆ ಕಿನಾಲ್ ನೀರಿನ ವ್ಯವಸ್ಥೆ ಕಲ್ಪಿಸುತ್ತಿದ್ದೇವೆ ಎಂದು ಹೇಳಿದರು.

ಮೂರ್ತಿ ಉದ್ಘಾಟನೆ ತದ ನಂತರ ಭವ್ಯ ಮೆರವಣಿಗೆಯೊಂದಿಗೆ ಸಚಿವ ಸತೀಶ ಜಾರಕಿಹೊಳಿ ವಿಧಾನಪರಿಷತ್ ಸದಸ್ಯ ಡಾ. ಯತಿಂದ್ರ ಸಿದ್ದರಾಮಯ್ಯ ಹಲವು ಮಹಾಸ್ವಾಮಿಗಳ ಜೋತೆಗೆ ಭವ್ಯ ವೇದಿಕೆ ಮೇಲೆ ಕರೆ ತರಲಾಯಿತು

ಅಮರೇಶ್ವರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಈ ಸಮಯದಲ್ಲಿ ಸಿದ್ದೇಶ್ವರ ಶರಣ–ರು.ಬೆಳಗಾವಿ ನಗರಾಭಿರುದ್ಧಿ ನಿಗಮದ ಅಧ್ಯಕ್ಷ ಲಕ್ಷ್ಮಣ ಚಿಂಗಳೇ ತೇರದಾಳ ಮತಕ್ಷೇತ್ರದ ಮುಖಂಡ ಸಿದ್ದು ಕೊಣ್ಣೂರ ಭಗೀರಥ ನಿಗಮದ ಅಧ್ಯಕ್ಷ ಬರಮಣ್ಣ ಉಪ್ಪಾರ.ಮಾ ಕು ಸ ಅ ರಾಜೇಂದ್ರ ಸಣ್ಣಕ್ಕಿ. ಕುರಿಉಣ್ಣೆನಿಗಮದಉಪಾಧ್ಯಕ್ಷಕಾಶೀನಾಥ್ ಹುಡೆದ ಪಂಚ್ ಗ್ಯಾರಂಟಿ ಅಧ್ಯಕ್ಷ ವಿನಯ ನಾವಲಗಟ್ಟಿ.ತಹಸೀಲ್ದಾರ ಮಹಾದೇವ ಸಣಮುರಿ.ಕಂದಾಯ ನಿರೀಕ್ಷಕ ರಾಜು ದಾನೊಳಿ.ಸಿ ಬಿ ಕೂಲಿಗೋಡ.ಭೀಮಶಿ ಮಗದುಮ.ಗ್ರಾಂಅಧ್ಯಕ್ಷನಿಂಗಪ್ಪನಿಡಗುಂದಿ. ಮಲ್ಲಪ್ಪ ಸಕ್ರೆಪ್ಪಗೋಳ.ಭರಮಪ್ಪ ಬಿಳಿಕುರಿ. ಜೊತೆಪ್ಪ ಬಿಳಿಕುರಿ.ಭೀರಪ್ಪ ನೀಡಗುಂದಿ. ಮಾಯಪ್ಪ ಸನದಿ.ಸುರೇಶ ಸಿಂಗಾಡಿ.ಲಕ್ಕಪ್ಪ ಬಿಳಿಕುರಿ.ಬಾಳಪ್ಪ ನಿಡಗುಂದಿ.ಮಲ್ಲಪ್ಪ ಸಿಂಗಾಡಿ.ರಂಗಪ್ಪ ಸನದಿ.ಮತ್ತಿತರರು ಉಪಸ್ಥಿತರಿದ್ದರು.

ವರದಿ ಮುರಿಗೆಪ್ಪ ಮಾಲಗಾರ

# 2025–26 ನೇ ಸಾಲಿನ ಜಿಲ್ಲಾ ಮಟ್ಟದ ಯುವಜನೋತ್ಸವ ಸ್ಪರ್ಧೆಗಳ ವಿಜೇತರಿಗೆ ಪ್ರಶಸ್ತಿ ವಿತರಣೆ ಸಾಂಸ್ಕೃತಿಕ ಚಟುವಟಿಕೆಗಳಿಂದ ಉತ್ತಮ ವ್ಯಕ್ತಿತ್ವ ರೂಪಗೊಳ್ಳುತ್ತದೆ: ಡಾ. ಅರುಣಕುಮಾರ ಗಾಳಿ

**ಬಾಗಲಕೋಟೆ :** ತಂತ್ರಜ್ಞಾನ ಕಾಲ ಘಟ್ಟದಲ್ಲಿರುವ ಯುವ ಸಮೂಹವು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವದರಿಂದ ಉತ್ತಮ ವ್ಯಕ್ತಿತ್ವ ರೂಪಗೊಳ್ಳುತ್ತದೆ ಎಂದು ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರು ಹೇಳಿದರು

ಅವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಬುಧವಾರ ನಡೆದ 2025–26 ನೇ ಸಾಲಿನ ಜಿಲ್ಲಾ ಮಟ್ಟದ ಯುವಜನೋತ್ಸವದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಪ್ರಶಸ್ತಿ ವಿತರಣೆ ಮಾಡಿ ಮಾತನಾಡಿದರು. ಮುಂದುವ–ರಿದು ಮಾತನಾಡಿ ಯುವಕರು ಯುವಜನೋತ್ಸವದಲ್ಲಿ ಪಾಲ್ಗೊಳ್ಳುವದರಿಂದ ನಮ್ಮ ನೆಲದ ಸಾಂಸ್ಕೃತಿಕ ಕಲೆಗಳ ಮಹತ್ವ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಇದರಿಂದ ನಮ್ಮ ಯುವ ಜನತೆಯಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಗುರುಪಾದ ಡೂಗನವರ ಮಾತನಾಡಿ ಜಿಲ್ಲಾ ಮಟ್ಟದ ಯುವಜನೋತ್ಸವದಿಂದ ಜಿಲ್ಲೆಯ ಯುವ ಪ್ರತಿಭೆಗಳು ಗುರುತಿಸಿ ಪ್ರೋತ್ಸಾಹಿಸಲು



ಪೂರಕವಾಗುತ್ತದೆ. ಸ್ಪರ್ಧೆಯಲ್ಲಿ ಸೋಲು ಗೆಲವು ಮುಖ್ಯವಲ್ಲ ಸ್ಪರ್ಧೆ ಮಾಡುವ ಮನಸ್ಸು ಮುಖ್ಯ ಎಂದು ಹೇಳಿದರು.

2025–26ರ ಜಿಲ್ಲಾ ಮಟ್ಟದ ಯುವಜನೋತ್ಸವದ ಫಲಿತಾಂಶ : ಜಾನಪದ ನೃತ್ಯ (ಗುಂಪು) ಸ್ಪರ್ಧೆ : ಪ್ರಥ–'ಮ– ಮುತ್ತುರಾಜ ಯಡಹಳ್ಳಿ ಕೊಟೆಕಲ್ಲ ತಂಡ, ದ್ವಿತೀಯ– ಸಾವಿತ್ರಿ ಹಂಚನಾಳ ತಂಡ, ಜಾನಪದ ಗೀತೆ (ಗುಂಪು) ಸ್ಪರ್ಧೆ: ಪ್ರಥಮ– ವೈಷ್ಣವಿ ಗೂಳಿ ಹಾಗೂ ತಂಡ, ದ್ವಿತೀಯ– ಶ್ರೀಯಾ ಜೊರಾಪೂರ ಹಾಗೂ ತಂಡ, ಚಿತ್ರಕಲೆ ಸ್ಪರ್ಧೆ (ವೈಯಕ್ತಿಕ) : ಪ್ರಥಮ–ಗೀತಾಂಜಲಿ ಎಸ್.ನಿರಂಜನ, ದ್ವಿತೀಯ–ಮಲ್ಲಿಕಾರ್ಜುನ ಹೂನ್ನೂರ, ತೃತೀಯ–ರಾಚಣ್ಣ ಮಡಿ, ಭಾಷಣ ಸ್ಪರ್ಧೆ (ವೈಯಕ್ತಿಕ): ಪ್ರಥಮ–ಮಯಾರಾಜ ಆರ್.ಪಿ, ದ್ವಿತೀಯ–ಮೇಘಾ ಅನಗವಾಡಿ, ತೃತೀಯ– ಅನುಶಾಬಾನು ಪಿಂಜಾರ, ವಿಜ್ಞಾನ ಮೇಳದ ಪ್ರದರ್ಶನ (ಗುಂಪು): ಪ್ರಥಮ–ಕಿರಣ ಪಮ್ಮಾರ ಹಾಗೂ ತಂಡ, ದ್ವಿತೀಯ– ಶ್ರೀನಿವಾಸಮೂರ್ತಿ ಹಾಗೂ ತಂಡ, ತೃತೀಯ– ಶಾಂಭವಿ ಹಾಗೂ ತಂಡ, ಕವಿತೆ ಬರೆಯುವುದು (ವೈಯಕ್ತಿಕ): ಪ್ರಥಮ–ಜಾಫರ್ ಜಾತಗಾರ, ದ್ವಿತೀಯ– ಕೀರ್ತಿ ಹೂಲಗೇರಿ, ತೃತೀಯ–ದೀಪಾ ಕಾನನ್ನವರ, ಕಥೆ ಬರೆಯುವುದು (ವೈಯಕ್ತಿಕ): ಪ್ರಥಮ–ಹನಮಂತ ಕಾಂಬಳೆ, ದ್ವಿತೀಯ– ಆರೋಬ ಮನಿಯಾರ, ತೃತೀಯ– ಪೈಜಾ ಇವರೆಲ್ಲರಿಗೂ ಪ್ರಶಸ್ತಿ ಮತ್ತು ಬಹುಮಾನವನ್ನು ವಿತರಣೆ ಮಾಡಲಾಯಿತು..

ಪ್ರಶಸ್ತಿ ವಿತರಣೆ ಕಾರ್ಯಕ್ರಮದಲ್ಲಿ ನವನಗರ ಸ.ಪ್ರ. ದ.ಕಾಲೇಜಿನ ಐಕ್ಯೂಎಸಿ ಸಂಚಾಲಕ ಡಾ.ಬಸವರಾಜ ಬೀಳಗಿ, ಪ್ರೊ.ಸಂಪತ್ತ ಲಮಾಣಿ, ಡಾ.ಚಂದ್ರಶೇಖರ ಕಾಳನ್ನವರ, ಡಾ.ಮಾರುತಿ ಪಾಟೋಳಿ, ಶ್ರೀಕಾಂತ ಚಿಮ್ಮಲ, ಸಂಗಮೇಶ ಬಡಿಗೇರ, ಪವಿತ್ರಾ ಜಕ್ಕಪ್ಪನವರ, ಡಾ.ಸುಮಂಗಲಾ ಮೇಟಿ, ಬಸವರಾಜ ಸಿಂದಗಿಮಠ, ಸಂಗಮೇಶ ಬ್ಯಾಳಿ ಪಾಲ್ಗೊಂಡಿದರು.

ಜಿಲ್ಲಾ ಮಟ್ಟದ ಯುವಜನೋತ್ಸವದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಯುವ ಕಲಾವಿದರು, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಬೋಧಕರು, ಬೋಧಕೇತರ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

# ಉಪಾಧ್ಯಕ್ಷರಾಗಿ ವೇದಾಂತ ಪೂಜಾರಿ ನೇಮಕ

**ಮಹಾಲಿಂಗಪುರ:** ಮುಧೋಳ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಸಂಘಟಿತ ಕಾರ್ಮಿಕ ವಿಭಾಗದ ಉಪಾಧ್ಯಕ್ಷರನ್ನಾಗಿ ಸಮೀಪದ ರನ್ನಬೆಳಗಲಿ ಪಟ್ಟಣದ ಯುವಕ ವೇದಾಂತ ಪೂಜಾರಿ ಅವರನ್ನು ನೇಮಕ ಮಾಡಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಅವರು ಸೋಮವಾರ ಉತ್ತೂರಿನ ನಿವಾಸದಲ್ಲಿ ವೇದಾಂತ ಪೂಜಾರಿ ಅವರಿಗೆ ನೇಮಕಾತಿ ಆದೇಶ ಪತ್ರವನ್ನು ನೀಡಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಪರಮಾನಂದ ಕುಟರಟ್ಟಿ, ಸಿದ್ದು ದಢೂತಿ, ರಾಮಣ್ಣ ಸಂಕ್ರಟ್ಟಿ, ಪ್ರಕಾಶ ಕೊಣ್ಣೂರ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.



# ಜ್ಯೂಡೋ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ




**ರಬಕವಿ :** ಇಲ್ಲಿಯ ಲಿಟಲ್ ಹಾರ್ಟ್ಸ್ ಬಿ. ಕೆ. ಕಾನ್ವೆಂಟ್ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿ ಆದಿತ್ಯ ಹಟ್ಟಿ ಪಾಟೀಲ ಬಾಗಲಕೋಟೆ ಜಿಲ್ಲಾ ಮಟ್ಟದ ಪ್ರೌಢಶಾಲಾ ವಿಭಾಗದ ಜ್ಯೂಡೋ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರು, ಸರ್ವ ಸದಸ್ಯರು, ಪ್ರಾಚಾರ್ಯರು,ದೈಹಿಕ ಶಿಕ್ಷಣ ಶಿಕ್ಷಕರು, ಹಾಗೂ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಯ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.

# ರಾಷ್ಟ್ರೀಯ ಪ್ರಶಸ್ತಿ ವಿಜೇತ ಸಂಜಯಗೆ ಸಚಿವ ಶಿವಾನಂದ ಪಾಟೀಲ ಸನ್ಮಾನ



**ವಿಜಯಪುರ :** ದೇಶದ ರಾಷ್ಟ್ರಪತಿಗಳಿಂದ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿರುವ ಬಸವನಬಾಗೇವಾಡಿ ವಿಧಾನಸಭೆ ವ್ಯಾಪ್ತಿಯ ಯುವಪ್ರತಿಭೆ ಸಂಜಯಕುಮಾರ ಬಿರಾದಾರ ಅವರನ್ನು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಸನ್ಮಾನಿಸಿದರು.

ಕೇಂದ್ರ ಸರಕಾರದ ಯುವ ಸಬಲೀಕರಣ ಸಚಿವಾಲಯ ನೀಡುವ ಪ್ರತಿಷ್ಠಿತ ಮೈ ಭಾರತ್ ರಾಷ್ಟ್ರೀಯ ಸೇವಾ ಯೋಜನೆಯ ಪ್ರಶಸ್ತಿಗೆ ಜಿಲ್ಲೆಯ ತಾವು ಪ್ರತಿನಿಧಿಸುವ ಬಸವನಬಾಗೇವಾಡಿ ಕ್ಷೇತ್ರದ ಕೊಲ್ಹಾರ ತಾಲೂಕಿನ ತೆಲಗಿ ಗ್ರಾಮದ ಸಂಜಯಕುಮಾರ ಯಂಕನಗೌಡ ಬಿರಾದಾರ ಭಾಜನರಾಗಿದ್ದರು. ಅಲ್ಲದೇ ಈಚೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ನವದೆಹಲಿಯಲ್ಲಿ ಪ್ರಶಸ್ತಿ ಸ್ವೀಕರಿಸಿದ್ದರು.

ರಾಷ್ಟ್ರೀಯ ಪ್ರಶಸ್ತಿ ಮೂಲಕ ಬಸವಜನ್ಮಭೂಮಿಗೆ ಕೀರ್ತಿ ತಂದಿರುವ ಸಂಜಯಕುಮಾರ ಬಿರಾದಾರ ಅವರನ್ನು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮಂಗಳವಾರ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನ ಪ್ರಧಾನ ಕಛೇರಿಯಲ್ಲಿ ಸಚಿವರು ಸನ್ಮಾನಿಸಿ,ಗೌರವಿಸಿದರು.

ಸಂಜಯ ತಮ್ಮ ಸಾಧನೆಯಿಂದ ಬಸವನಬಾಗೇವಾಡಿ ತಾಲೂಕಿಗೆ ಮಾತ್ರವಲ್ಲ ಜಿಲ್ಲೆಯ ಮೂಲಕ ನಾಡಿಗೆ ಕೀರ್ತಿ ತಂದಿದ್ದಾರೆ. ಅವರ ಸಾಧನೆ ಇಂದಿನ ಯುವ ಸಮೂಹಕ್ಕೆ ಪ್ರೇರಣೆ, ಅನುಕರಣೀಯ ಮಾತ್ರವಲ್ಲದೆ ಪ್ರೋತ್ಸಾಹದಾಯಕವಾಗಿದೆ ಎಂದು ಸಚಿವರು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಸಂಜಯಕುಮಾರ ಅವರ ತಂದೆ ಯಂಕನಗೌಡ ಬಿರಾದಾರ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

# ನಿಗಮದ ಅಧ್ಯಕ್ಷ ಎಸ್. ಜಿ. ನಂಜಯ್ಯನಮಠರಿಗೆ ಸನ್ಮಾನ.



**ಮಹಾಲಿಂಗಪುರ :** ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಮತ್ತು ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಎಸ್. ಜಿ. ನಂಜಯ್ಯನಮಠ ಅವರನ್ನು ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡರು ಬಾಗಲಕೋಟೆ ಕಾಂಗ್ರೆಸ್ ಕಾರ್ಯಾಲಯದಲ್ಲಿ ಇತ್ತೀಚೆಗೆ ಸನ್ಮಾನಿಸಿದರು.

ರಬಕವಿ–ಬನಹಟ್ಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಪ್ಪ ಸಿಂಗಾಡಿ, ಮುಖಂಡರಾದ ಶಂಕರ ತಿಮ್ಮಾಪೂರ, ವಿಠ್ಠಲ ಹೊಸಮನಿ, ಪರಶುರಾಮ ಮೇತ್ರಿ, ಸಾಗರ ಹೊಸಮನಿ, ಶಶಿಧರ ಮೆಕ್ಕೆನ್ನವರ, ಯಮನಪ್ಪ ಮಾಂಗ ಸೇರಿದಂತೆ ಇನ್ನೂ ಹಲವರು ಉಪಸ್ಥಿತ–ರಿದ್ದರು.

# ಸಾಧನೆಗೆ ಬಡತನ ಅಡ್ಡಿಯಾಗದು: ಗೆಣ್ಣೂರ



**ವಿಜಯಪುರ:** ಸಾಧನೆಗೆ ಬಡತನ, ಕಷ್ಟ ಕಾರ್ಪಣ್ಯಗಳು ಅಡ್ಡಿಯಾಗಲಾರವು, ಸತತ ಓದಿನಿಂದ ಇಚ್ಛಿಸಿದ ಗುರಿಯನ್ನು ನಾವು ತಲುಪಬಹುದು ಎಂದು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಹೇಳಿದರು.

ನಗರದ ಟಕ್ಕೆಯಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (ಬಿಸಿಎಂ)ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿ ಹಿರಿಯ ವಿದ್ಯಾರ್ಥಿಗಳ ಸಹಯೋಗದಿಂದ ಆರನೇ ಹಾಸ್ಟೆಲ್ ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ತಮ್ಮ ಜೀವನದ ಕೆಲವು ಘಟನೆಗಳನ್ನು ಮೆಲಕು ಹಾಕುತ್ತ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು.

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಮಾನವರ ಮಾತನಾಡಿ ಹಾಸ್ಟೆಲ್ ಗಳು ಕೇವಲ ಅನ್ನವನ್ನು ಮಾತ್ರ ಕೊಡುವುದಿಲ್ಲ, ಪ್ರತಿಯೊಬ್ಬ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ನಿವೃತ್ತ ನಿಲಯಪಾಲಕ ಎಂ. ಎಸ್. ಕಟಬು ಮಾತನಾಡಿ ಜನನಿ ಜನ್ಮಭೂಮಿ ಸ್ವರ್ಗಕಿಂತಲೂ ಮಿಗಿಲು ಎಂಬ ವಿಷಯವನ್ನು ಹೇಳಿದರು. ಹಲವು ಹಳೆಯ ವಿದ್ಯಾರ್ಥಿಗಳು ತಮ್ಮ ನೆನಪಿನಂಗಳದಲ್ಲಿ ಅಚ್ಚಳಿಯದಂತಿರುವ ಭಾವನೆಗಳ ಬುತ್ತಿಯನ್ನು ತಮ್ಮ ಅನಿಸಿಕೆಗಳ ಮೂಲಕ ತೆರೆದಿಟ್ಟರು.

ಒಟ್ಟಾರೆಯಾಗಿ ಈ ವರ್ಷದ ಹಾಸ್ಟೆಲ್ ಹಬ್ಬ ದೀಪಾವಳಿ ಹಬ್ಬದ ಮುನ್ನವೇ ಹಬ್ಬದ ವಾತಾವರಣ ಸೃಷ್ಟಿ ಮಾಡಿ ಸ್ನೇಹಿತರ ಪುನರಮಿಲನಕ್ಕೆ ಸಾಕ್ಷಿಯಾಗಿತ್ತು.

ಈ ಸಂದರ್ಭದಲ್ಲಿ ಲಕ್ಷ್ಮಣ ಸನದಿ, ಶಿಂಧೆ, ಎಸ್.ಎಸ್. ಕಬಾಡೆ, ರವಿಕುಮಾರ ಬಿರಾದಾರ, ನಾಗೇಶ ಅಳ್ಳಿ, ಎಚ್. ಎಲ್.ದೊಡ್ಡಮನಿ, ಸಂತೋಷ ಬಗಲಿ, ಮಹೇಶ ಸಾಲಿಕೇರಿ, ಅವಜಿ, ಗಿರಿಗೌಡರ,ಸಂತೋಷ ಗುದಳಿ, ಚಂದ್ರು ಗುಳಬಾಳ, ಹುಸನಪ್ಪ, ಸಿದ್ದನಗೌಡ, ಕಾಡೇಶ, ಮನಸೂರ್ ಬೀಳಗಿ, ಶ್ರೀಕಾಂತ ಇಚೂರ್, ಪ್ರವೀಣ್ ಮ್ಯಾಗೇರಿ, ಜೋತೆಪ್ಪ, ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅನೇಕ ಹಿರಿಯ ವಿದ್ಯಾರ್ಥಿಗಳು ಉಪಸ್ಥಿತರಿದ್ದು, 6ನೇ ಹಾಸ್ಟೆಲ್ ಹಬ್ಬ ಅತ್ಯಂತ ಯಶಸ್ವಿಯಾಗಿ, ಅರ್ಥಪೂರ್ಣವಾಗಿ ನೆರವೇರಲು ಸಹಕರಿಸಿದರು.

# ವಾಲ್ಮೀಕಿ ತತ್ವಾದರ್ಶಗಳು ನಮಗೆಲ್ಲ ಪ್ರೇರಣೆ : ಡಾ. ಮಾಧವ ಗುಡಿ



**ವಿಜಯಪುರ:** ಭಾರತದ ಎರಡು ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಇಡೀ ವಿಶ್ವಕ್ಕೆ ಶ್ರೇಷ್ಠ ಸಂದೇಶ ನೀಡುವ ಮೂಲಕ ಮಾದರಿಯಾಗಿ ನಿಂತಿವೆ.

ನಿಸರ್ಗದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ವಾಲ್ಮೀಕಿಯವರಲ್ಲಿ ಕವಿತ್ವ ಭಾವನೆಯಿತ್ತು.

ರಾಮಾಯಣ ಎಂಬ ಮಹಾಕಾವ್ಯವು ಅವರ ಕವಿತ್ವಕ್ಕೆ ಸಾಕ್ಷಿಯಾಗಿ ನಿಂತ, ಭಾರತೀಯರು ಹೆಮ್ಮೆಪಡುವ ಶ್ರೇಷ್ಠ ಕೃತಿಯಾಗಿ ಹೊರಹೊಮ್ಮಿದೆ. ಮಾನವೀಯ ಮೌಲ್ಯಗಳು, ಪ್ರಜಾಸತ್ತಾತ್ಮಕ ರಾಜನೀತಿ ಅಂಶಗಳು, ಸಹೋದರತೆಯ ಭಾವನೆಯನ್ನು ಈ ಕಾವ್ಯ ನಮಗೆಲ್ಲ ಪರಿಚಯಿಸಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ ಆದಿ ಕವಿ ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು ರಾಮಾಯಣ ಮಹಾಕಾವ್ಯದಲ್ಲಿ ಅವರು ನೀಡಿದ ಸಂದೇಶಗಳು ನಮಗೆಲ್ಲ ಮಾದರಿಯಾಗಿದ್ದು, ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡೋಣ ಎಂದರು.

ಮುಖ್ಯ ಅತಿಥಿಗಳಾದ ಕಸಾಪ ಗೌರವ ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ ಮಾತನಾಡಿ ಲವ– ಕುಶರಿಗೆ ಗುರುವಾಗಿದ್ದ ವಾಲ್ಮೀಕಿ ರಾಮಾಯಣ ಎಂಬ ಮಹಾಕಾವ್ಯದ ಮೂಲಕ ಬಹು ದೊಡ್ಡ ಸಂದೇಶ ನೀಡಿ ಹೋಗಿದ್ದಾರೆ. ಅದರಲ್ಲಿನ ತತ್ವಾದರ್ಶಗಳು ಇಂದು ಆದರ್ಶ ಸಮಾಜ ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದರು. ಕಸಾಪ ನಗರ ಘಟಕದ ಗೌರವ ಅಧ್ಯಕ್ಷೆ ಜಯಶ್ರೀ ಹಿರೇಮಠ,ನಗರ ಘಟಕದ ಅಧ್ಯಕ್ಷ ಜಗದೀಶ ಬೋಳಸೂರ ವೇದಿಕೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಮಾತನಾಡಿ ವಾಲ್ಮೀಕಿ ಕೇವಲ ಒಂದು ಸಮಾಜಕ್ಕೆ ಸೀಮಿತರಾದವರಲ್ಲ ಬದಲಾಗಿ ಅವರು ಇಡೀ ನಾಡಿಗೆ ಸೇರಿದವರು ಎಂದರು.

ಕಾರ್ಯಕ್ರಮದಲ್ಲಿ ಪದಾಧಿಕಾರಿಗಳಾದ ಅರ್ಜುನ ಶಿರೂರ, ಕಮಲಾ ಮುರಾಳ, ಸುಖ–ದೇವಿ ಅಲಬಾಳಮಠ, ಜಿ.ಎಸ್.ಬಳ್ಳೂರ, ಶಾಂತಾ ವಿಭೂತಿ, ಡಾ. ಸಂಗಮೇಶ ಮೇತ್ರಿ, ರವಿ ಕಿತ್ತೂರ, ಸಿದ್ದು ಮಾನೆ, ತೇಜಸ್ವಿನಿ ವಾಂಗಿ, ಉದಯಕುಮಾರ ವಾಂಗಿ, ಧರು ಕಿಲಾರಿ, ಅಶೋಕ ಸಿರಗುಪ್ಪಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಆಚರಣೆ



**ಇಂಡಿ :** ಪಟ್ಟಣದ ವೀರರಾಣಿ ಕಿತ್ತೂರು ಚೆನ್ನಮ್ಮ ಸಹಕಾರಿ ಸಂಘದಲ್ಲಿ ವೀರರಾಣಿ ಕಿತ್ತೂರು ಚನ್ನಮ್ಮನವರ 247ನೇ ಜಯಂತಿ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಸಂಘದ ಅಧ್ಯಕ್ಷ ಮಲ್ಲೇಶಪ್ಪ ಬಳಬಟ್ಟಿ, ಉಪಾಧ್ಯಕ್ಷ ಶ್ರೀಶೈಲ ಕೋರಳ್ಳಿ, ನಿರ್ದೇಶಕರಾದ ರವಿ ಕುದುರೆ, ರಾಜು ನಾಯಕೋಡಿ ಸೇರಿದಂತೆ, ಸಂಘದ ವ್ಯವಸ್ಥಾಪಕಿ ಅಶ್ವಿನಿ ಮುಳಜಿ, ಸಿಬ್ಬಂದಿ ಚೇತನ ಹೊಸಮನಿ ಪರಮಾರ ಮಾಪಸಿಂಗ, ಸಂಜಯ್ ದಿಂಡೂರ, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ವಿಶ್ವಕ್ಕೆ ಪರಿಚಯಿಸಿದ ರಾಮಾಯಣ ಮಹಾಕಾವ್ಯ

**ವಿಜಯಪುರ:** ವಿಶ್ವಕ್ಕೆ ರಾಮಾಯಣ ಮಹಾಕಾವ್ಯದ ಮೂಲಕ ಭಾರತೀಯ ಸಾಂಸ್ಕೃತಿಕ, ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ತಿಳಿಸಿಕೊಟ್ಟ ಮಹಾಕವಿ ಮಹರ್ಷಿ ವಾಲ್ಮೀಕಿಯವರಾಗಿದ್ದಾರೆ ಎಂದು ಹಿರಿಯ ನ್ಯಾಯವಾದಿ ಕೆ.ಎಫ. ಅಂಕಲಗಿ ಹೇಳಿದರು.

ನಗರದ ವೀರಶೈವ ಲಿಂಗಾಯತ ಸಭಾಭವನದಲ್ಲಿ ಅಖಿಲ ಭಾರತ ಲಿಂಗಾಯತ ಮಹಾಸಭಾ ಜಿಲ್ಲಾ ಏರ್ಪಡಿಸಿದ ಶಿವಾನುಭಗೋಷ್ಠಿಯಲ್ಲಿ ಮಾತನಾಡಿದ ಅವರು ವಾಲ್ಮೀಕಿ ರಚಿಸಿದ ಮಹಾಕಾವ್ಯ ರಾಮಾಯಣದಲ್ಲಿ ಸರ್ವಕಾಲಿಕ ಮೌಲ್ಯಗಳು, ಜನಪರ ನಿಲವುಗಳು,

ಪೂರ್ಣಪ್ರಜ್ಞೆ ವಾಸ್ತವತೆಯ ಪ್ರತಿರೂಪ ಮೌಲ್ಯಗಳ ವಿವಿಧ ಸಂಸ್ಕೃತಿಗಳ ಸಮನ್ವಯತೆ ತಿಳುವಳಿಕೆಯ ವಿಶ್ವಕೋಶವಿದೆ. ರಾಮಾಯಣದ ತತ್ವ ಆದರ್ಶಗಳನ್ನು ಅದರಂತೆ ಮೂಲ ಅಂಶಗಳು ಬೆಳಕಿಗೆ ಬರಬೇಕಾಗಿದೆ. ಮೂಲಕಾವ್ಯದ ಪಾತ್ರಗಳ ಮೂಲಕ ಜವಾಬ್ದಾರಿ ಮತ್ತು ಕರ್ತವ್ಯದ ಮಹತ್ವವನ್ನು ಮುಂದಿನ ಪೀಳಿಗೆಗೆ





ಪರಿಚಯಿಸುವ ಕಾರ್ಯ ಆಗಬೇಕಾಗಿದೆ ಎಂದರು.

ಮಹಾಸಭೆಯ ಕೋಶಾಧ್ಯಕ್ಷ ಮ.ಗು. ಯಾದವಾಡ ಮಾತನಾಡಿ ಇತಿಹಾಸವನ್ನು ತಿಳಿದುಕೊಂಡು ಸಮಾಜದ ಜನರನ್ನು ಜಾಗೃತಿ ಮಾಡಬೇಕು. ರಾಷ್ಟ್ರೀಯ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಬೆಳೆಯಬೇಕು ಎಂದರು.

ಜಿಲ್ಲಾಧ್ಯಕ್ಷ ವಿ.ಸಿ. ನಾಗಠಾಣ ಮಾತನಾಡುತ್ತ, ಭಾರತದ ಭವ್ಯ ಪರಂಪರೆಯಲ್ಲಿ ರಚಿತವಾದ ಮೂಲ ರಾಮಾಯಣ ಜ್ಞಾನವನ್ನು ಕುರಿತಾಗಿದೆ. ಮಹರ್ಷಿ ವಾಲ್ಮೀಕಿ ಸಂಸ್ಕೃತವನ್ನು ಕಲಿತು ರಾಮಾಯಣ ರಚಿಸಿದ್ದಾರೆ. ಶ್ರೇಷ್ಠತೆ ಮೌಲ್ಯಗಳನ್ನು ಹೊಂದಿರುವ ರಾಮನ ಜೀವನ ಕುರಿತಾಗಿ ಪರಿಚಯಿಸುವಲ್ಲಿ ಸರ್ವಕಾಲಿಕ ಸಾಮಾಜಿಕ ಮೌಲ್ಯಗಳನ್ನು ಸನ್ಮಾರ್ಗಕ್ಕೆ ಒಯ್ಯುವ ದಾರಿದೀಪವಾಗಿವೆ.

24 ಸಾವಿರ ಶ್ಲೋಕಗಳನ್ನು ಹೊಂದಿದ ಅವೆಲ್ಲವೂ ಮಾನವ ಕುಲದ ಸೈದ್ಧಾಂತಿಕ ವಿಚಾರಧಾರೆಗಳನ್ನು ಜ್ಞಾನದ ಚಿಂತನೆಯನ್ನು ತಿಳಿಸಿಕೊಡುತ್ತದೆ.

ಅವುಗಳನ್ನು ಜೀವನದಲ್ಲಿ ನಾವು ಅಳವಡಿಸಿಕೊಳ್ಳಬೇಕಾಗಿದೆ ಎಂದರು.

ಶರಣೆ ಅಕ್ಕಮಹಾದೇವಿ ಬುರ್ಲಿ, ಬಿ.ಆರ್. ಬನಸೋಡೆ ವಚನಗೀತೆ ಹಾಡಿದರು. ಕಾರ್ಯಕ್ರಮದಲ್ಲಿ ಡಾ. ವಿ.ಡಿ. ಐಹೊಳ್ಳಿ, ಮಹಾದೇವ ಹಾಲಳ್ಳಿ, ಎಸ್.ಎಸ್. ಪಾಟೀಲ, ಅಪ್ಪಾಸಾಹೇಬ ಕೋರಿ, ಜಂಬುನಾಥ ಕಂಚ್ಯಾಣಿ, ಈರಣ್ಣ ತೊಂಡಿ–ಕಟ್ಟಿ, ಸುಭಾಸ ಯಾದವಾಡ, ಜಗದೀಶ ಮೋಟಗಿ, ಮಲ್ಲಿಕಾರ್ಜುನ ಅಮರಣ್ಣವರ ಉಪಸ್ಥಿತರಿದ್ದರು.

ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಬಿ.ಟಿ. ಈಶ್ವರಗೊಂಡ ಸ್ವಾಗತಿಸಿದರು. ಉಪಾಧ್ಯಕ್ಷ ಸಹದೇವ ನಾಡಗೌಡರ ವಂದಿಸಿದರು.

ಸಾಹಿತಿ ಸಂಗಮೇಶ ಬದಾಮಿ ಕಾರ್ಯಕ್ರಮ ನಿರ್ವಹಿಸಿದರು. ಶರಣರು, ಶರಣೆಯರು,

# ಬಾಲಕಿಯರು ವಸತಿ ನಿಲಯದ ಸದುಪಯೋಗ ಪಡೆದುಕೊಳ್ಳಿ: ಶಾಸಕ ರಾಜುಗೌಡ

**ದೇವರಹಿಪ್ಪರಗಿ :** ವಿದ್ಯಾರ್ಥಿನಿಯರ ಗುಣಮಟ್ಟದ ಶಿಕ್ಷಣದ ಕಾರಣಕ್ಕಾಗಿ ಸುಂದರ ಸುಸಜ್ಜಿತ ಶಿಸ್ತಿನಿಂದ ಕುಡಿದ ಕಟ್ಟಡವನ್ನು ಸರಕಾರ ಪೂರೈಸಿದೆ.

ಇದರ ಸದುಪಯೋಗವನ್ನು ವಿದ್ಯಾರ್ಥಿನಿಯರು ಪಡೆದುಕೊಳ್ಳಬೇಕೆಂದು ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಹೇಳಿದರು.

ಪಟ್ಟಣದಲ್ಲಿ ಗುರುವಾರದಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ. ಬೆಂಗಳೂರು, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ವಿಜಯಪುರ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಿಂದಗಿ(ಬಿ.ಸಿ.ಡಬ್ಲ್ಯೂ.ಡಿ 2543) ಇಲಾಖೆಯಿಂದ ಸುಮಾರು 243 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಡಿ.ದೇವರಾಜ ಅರಸ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯದ ನೂತನ ಕಟ್ಟಡದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು,ಹಿಂದುಳಿದ ವರ್ಗಗಳ ಸಮುದಾಯ

ಕುಟುಂಬದ ಮಕ್ಕಳ ಶೈಕ್ಷಣಿಕ ಅಭಿವದ್ಧಿ ನಿಟ್ಟಿನಲ್ಲಿ ಸರ್ಕಾರ ಹಲವಾರು ವಿನೂತನ



ಯೋಜನೆಗಳನ್ನು ಜಾರಿ ತಂದಿದೆ. ಈ ರೀತಿಯ ಯೋಜನೆಗಳನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಲು ಮುಂದಾಗಿ ಎಂದರು.

ವಿದ್ಯಾರ್ಥಿಗಳ ಅನುಕೂಲಕ್ಕಾಗಿಪಟ್ಟಣದ ಸಾರ್ವಜನಿಕ ಗ್ರಂಥಾಲಯಕ್ಕೆ ಮುಖ್ಯಾಧಿಕಾರಿಗಳಿಗೆ ಭೇಟಿ ನೀಡಿ ಪರೀಶೀಲಿಸಲು ಹಾಗೂ ವಸತಿ ನಿಲಯದಲ್ಲಿ ಗ್ರಂಥಾಲಯ ಸ್ಥಾಪಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಇಲಾಖೆ ಅಧಿಕಾರಿಗಳಾದ ರವೀಂದ್ರ ಬಂಥನಾಳ ಪ್ರಾಸ್ತಾವಿಕ ಮಾತನಾಡಿ,ಬಾಲಕಿಯರ ವಸತಿ ನಿಲಯದ ನೂತನ ಕಟ್ಟಡಕ್ಕೆ ಪ.ಪಂ ವತಿಯಿಂದ ಉಚಿತ ಸಿಎ ಸೈಟ್ ನೀಡಲಾಗಿದ್ದು, ಶಾಸಕರಿಂದ ಉದ್ಘಾಟನೆಯಾಗಿದೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಇಲಾಖೆ ವತಿಯಿಂದ ಅಭಿನಂದನೆ ಸಲ್ಲಿಸುತ್ತೇವೆ ಎಂದು ಹೇಳಿದರು.

ಪ.ಪಂ ಉಪಾಧ್ಯಕ್ಷ ರಮೇಶ ಮಸಿಬಿನಾಳ, ಪ್ರಕಾಶ ಮಲ್ಹಾರಿ ಅವರು ಮಾತನಾಡಿ ಪಟ್ಟಣದ ಅಭಿವೃದ್ಧಿಗೆ ಶಾಸಕರ ಸಹಕಾರ ಅಗತ್ಯ ಎಂದರು.

ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ರಿಯಾಜ್ ಯಲಿಗಾರ, ಪ.ಪಂ ಮುಖ್ಯಾಧಿಕಾರಿ ಅಪ್ರೋಜ ಅಹಮದ ಪಟೇಲ, ಅಭಿಯಂತ್ರರಾದ ಬಸವರಾಜ, ಗುತ್ತಿಗೆದಾರ ಖಂಡೆರಾವ್ ಪುಲಸೆ,ಪ.ಪಂ ಅಧ್ಯಕ್ಷರ ಪ್ರತಿನಿಧಿಯಾದ ಬಸವರಾಜ ದೇವಣಗಾಂವ,ಸದಸ್ಯರುಗಳಾದ

ಕಾಸುಗೌಡ ಬಿರಾದಾರ ಜಲಕತ್ತಿ, ಕಾಸಪ್ಪ ಜಮಾದಾರ, ಸಿಂಧೂರ ಡಾಲೇರ, ಮುಖಂಡರುಗಳಾದ ಸೋಮು ದೇವೂರ, ವಿನೋದ ಚವ್ಹಾಣ, ಮುನೀರ್ ಅಹ್ಮದ್ ಮಳಖೇಡ, ವೀರೇಶ ಕುದರಿ, ನಿಲಯ ಪಾಲಕರುಗಳಾದ ನಂದಾಜ್ಯೋತಿ ನಾಶಿ, ಸೈಪನ್ ಮುಲ್ಲಾ,

ಪ್ರಭಾಕರಬಿರಾದಾರ,ಗೀರೀಶಕಟಕದೊಂಡ, ನಂದಪ್ಪ ಆನಗೊಂಡ ಸೇರಿದಂತೆ ಪಟ್ಟಣದ ಪ್ರಮುಖರು, ಗಣ್ಯರು, ವಸತಿ ನಿಲಯದ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಸತಿ ನಿಲಯ ಪಾಲಕ ನಾನಾಗೌಡ ಸಿದ್ದರಡ್ಡಿ ಸ್ವಾಗತಿಸಿ ವಂದಿಸಿದರು.

ಕಸಾಪ ಅಧ್ಯಕ್ಷ ಸಿದ್ದು ಮೇಲಿನಮನೆ

# ಇಂತಹ ಕೀಳುಮಟ್ಟದ ರಾಜಕಾರಣೆ ಎಲ್ಲೂ ನೋಡಿಲ್ಲ: ರಮೇಶ ಜಾರಕಿಹೊಳಿ ವಿರುದ್ಧ ಗುಡುಗಿದ ಚಿದಾನಂದ ಸವದಿ

**ಅಥಣಿ :** ಗೋಕಾಕ ಶಾಸಕ ರಮೇಶ್ ಜಾರಕಿಹೊಳಿ ಅವರು ಅಥಣಿ ಪಟ್ಟಣದ ಶಿವಣಗಿ ಕಾರ್ಯಾಲಯದಲ್ಲಿ ನಡೆದ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ಚುನಾವಣೆಯ ಪೂರ್ವಭಾವಿ ಸಭೆಯಲ್ಲಿ ಶಾಸಕ ಲಕ್ಷ್ಮಣ ಸವದಿ ಅವರ ಕುರಿತು ಏಕವಚನದಲ್ಲಿ ಹಾಗೂ ಅವಾಚ್ಯ ಪದಗಳನ್ನು ಬಳಸಿ ಕೇವಲವಾಗಿ ಮಾತನಾಡಿದ್ದಕ್ಕೆ ಯುವ ನಾಯಕ ಚಿದಾನಂದ ಸವದಿ ಅವರು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಅವರು ಅಥಣಿಯ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ ರಮೇಶ ಜಾರಕಿಹೊಳಿ ಅವರ ಸಂಸ್ಕಾರದ ಕುರಿತು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.

ಆ ಮರ್ಯಾದಸ್ಥ ಶಾಸಕ ಮರ್ಯಾದಾ ರಾಮಪ್ಪ ಜಾರಕಿಹೊಳಿ ನಮ್ಮ ತಂದೆಯವರ ಬಗ್ಗೆ ಅಶ್ಲೀಲ ಪದಗಳನ್ನು ಬಳಸಿ, ಏಕವಚನದಲ್ಲಿ, ಬಾಯಿಗೆ ಬಂದ ಹಾಗೆ ಮಾತನಾಡಿದ್ದಾನೆ.

ಇದು ಏನು ತೋರಿಸಿ ಕೊಡುತ್ತದೆ ಎಂದ–ರೆ, ಒಬ್ಬ ಸಂಸ್ಕಾರ ಇಲ್ಲದ ಮಗ ಯಾವ ರೀತಿ ಮಾತನಾಡುತ್ತಾನೆ ಎಂಬುದು ಪ್ರತ್ಯಕ್ಷ ಸಾಕ್ಷಿಯಾಗಿದೆ ಎಂದು ಚಿದಾನಂದ ಸವದಿ ಹೇಳಿದರು.

ನಮ್ಮ ತಂದೆ ನಮಗೆ ಒಳ್ಳೆಯ ವಿದ್ಯೆಯ ಜೊತೆ ಸಂಸ್ಕಾರವನ್ನೂ ಕೊಟ್ಟಿದ್ದಾರೆ.

ಯಾರ ಜೊತೆ ಹೇಗೆ ನಡೆದುಕೊಳ್ಳಬೇಕು, ಹೇಗೆ ಮಾತಾಡಬೇಕು ಎಂದು ಕಲಿಸಿದ್ದಾರೆ. ನಿನ್ನೆ ಅವರು ಮಾತನಾಡಿದ ಭಾಷೆ ಅವರ ಮನೆಯಲ್ಲಿ ಕೊಟ್ಟಿರತಕ್ಕಂತ ಸಂಸ್ಕಾರ. ಬಹುಶಃ ಅವರ ಹಿರಿಯರು ಆತನಿಗೆ 6ನೇ ವರ್ಷದಲ್ಲಿ ಶಾಲೆಗೆ ಕಳುಹಿಸಿದ್ದರೆ, ಈ ತರಹದ ಭಾಷೆ ಉಪಯೋಗಿಸುತ್ತಿರಲಿಲ್ಲ ಅನಿಸುತ್ತೆ.

ಅವನಿಗೆ ಶಾಲೆ ಕಲಿಯಬೇಕಾದ ಸಂದರ್ಭದಲ್ಲೇ ಕಳ್ಳ ಭಟ್ಟಿ ಮಾಡೋದನ್ನ



ಕಲಿಸಿದ್ದಾರೆ, ಅದಕ್ಕಾಗಿ ಈ ರೀತಿ ಭಾಷೆ ಬರುತ್ತಿದೆ. ಅವನಂತ ಕೀಳು ಮಟ್ಟದ ರಾಜಕಾರಣಿಯನ್ನು ನಾನು ಎಲ್ಲೂ ನೋಡಿಲ್ಲ," ಎಂದು ರಮೇಶ್ ಜಾರಕಿಹೊಳಿ ವಿರುದ್ಧ ಕೆಂಡಕಾರಿದರು.

**ಧಾರ್ಮಿಕ ಕೇಂದ್ರಕ್ಕೆ ಅವಮಾನ:**

ರಮೇಶ್ ಜಾರಕಿಹೊಳಿ ಅವರು ಡಿಸಿಸಿ ಬ್ಯಾಂಕ್ ಕುರಿತು ಆಡಿದ ಮತ್ತೊಂದು ಹೇಳಿಕೆಯನ್ನು ಉಲ್ಲೇಖಿಸಿದ ಚಿದಾನಂದ, ಬಾಲಚಂದ್ರ ಜಾರಕಿಹೊಳಿ ಅವರು ಮುರಗೋಡ ಮಹಾಂತ ಅಜ್ಜನವರ ಆಶೀರ್ವಾದದಿಂದ ನಡಿಲಿ' ಎಂದಿದ್ದರು. ಆದರೆ ಈ ಪುಣ್ಯಾತ್ಮ ನಿನ್ನೆ ಮಾತಾಡುವಾಗ ನಾನು ಹೇಳಿದ ಹಾಗೆ ಮಾಡಿಲಿಲ್ಲ ಎಂದರೆ, ನಾನು ಆ ಕಡೆ ಉಚ್ಚಿ ಕೂಡ ಒಯ್ಯೋದಿಲ್ಲ' ಎಂದು ಹೇಳುತ್ತಾನೆ.

ಮುರಗೋಡ ಮಹಾಂತ ಅಜ್ಜನವರ ಆಶೀರ್ವಾದ ಇರುವ ಡಿಸಿಸಿ ಬ್ಯಾಂಕ್‌ನಲ್ಲಿ ತಿರುಗಿ ಉಚ್ಚಿ ಕೂಡ ಒಯ್ಯೋದಿಲ್ಲ ಎಂದು ಹೇಳುತ್ತಾನೆ ಎಂದರೆ, ಆತನಲ್ಲಿ ಯಾವ ತರಹದ ಸಂಸ್ಕಾರ ಇದೆ ಎಂಬುದು ತಿಳಿಯುತ್ತದೆ.

ಇದು ಮುರಗೋಡ ಮಹಾಂತ ಅಜ್ಜರಿಗೆ ಸನ್ಮಾನ್ಯ ಮರ್ಯಾದಸ್ಥ ರಾಮಪ್ಪ ಜಾರಕಿಹೊಳಿ ಅವರು ಮಾಡಿರುವ ಅವಮಾನ.ಇದನ್ನುನಾವುಖಂಡಿಸುತ್ತೇವೆ." ಎಂದರು

ಜಾರಕಿಹೊಳಿ ಅವರ ಆಡಳಿತಾವಧಿಯ ವೈಫಲ್ಯಗಳನ್ನು ಎತ್ತಿ ತೋರಿಸಿದ ಚಿದಾನಂದ ಸವದಿ, "ಇಂದು ಘಟಪ್ರಭಾ ಸಕ್ಕರೆ ಕಾರ್ಖಾನೆ ಪರಿಸ್ಥಿತಿ ಏನಾಗಿದೆ ಆ ಕಾರ್ಖಾನೆ ಹಾಳಾಗಿದ್ದು ಯಾರಿಂದ ಗೋಕಾಕ್ ಮಿಲ್ ನಲ್ಲಿ ಸುಮಾರು 8 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದರು, ಇವತ್ತು ಎಲ್ಲ ಕುಟುಂಬಗಳು ಬೀದಿಪಾಲು ಆಗಲಿಕ್ಕೆ ಕಾರಣೀಭೂತರು ಯಾರು ಇವತ್ತು ಅಲ್ಲಿ ಕೇವಲ 250 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಡಿಸಿಸಿ ಬ್ಯಾಂಕ್‌ನಲ್ಲಿ ನೂರಾರು ಕೋಟಿ ಸಾಲ ಪಡೆದವರು ಯಾರು" ಎಂದು ಪ್ರಶ್ನಿಸಿದರು.

ಇದೇ ಮಹಾನುಭಾವ ಮನೆ ಬಿಟ್ಟು ಹೊರಗೆ ಬಂದಾಗ, ಇದೇ ಡಿಸಿಸಿ ಬ್ಯಾಂಕ್‌ನಲ್ಲಿ 27 ಲಕ್ಷ ರೂಪಾಯಿ ಲೋನ್ ತೆಗೆದುಕೊಂಡು ತನ್ನ ರಾಜಕೀಯ ಅಸ್ತಿತ್ವ ಕಾಪಾಡಿಕೊಂಡಿದ್ದ. ಈಗ ಅದೇ ಬ್ಯಾಂಕಿನ ಕಡೆ ಉಚ್ಚಿ ಕೂಡ ಒಯ್ಯೋದಿಲ್ಲಾ ಎಂದು ಹೇಳುತ್ತಾನೆ ಎಂದರೆ ಇದು ಸರಿಯಲ್ಲ," ಎಂದರು.

ಯಾವ ಉದ್ದೇಶದಿಂದ ಈ ರೀತಿ ಮಾತಾಡುತ್ತಾರೆ ಗೊತ್ತಿಲ್ಲ.

ಮತ್ತೊಮ್ಮೆ ಏನಾದರೂ ಈ ರೀತಿ ಪದ ಬಳಕೆ ಆದಲ್ಲಿ ನನಗೂ ಕೂಡ ಪದ ಬಳಕೆ ಮಾಡಲು ಬರುತ್ತೆ. ನನ್ನ ಬಾಯಿಗೆ ಏನಾದರೂ ಸಿಕ್ಕರೆ ಖಂಡಿತವಾಗಿ ಅವನು ದಿನಾಲೂ 10 ಬಿಪಿ ಗುಳಿಗೆ ತಗೋಬೇಕಾಗುತ್ತೆ.

ಇದಕ್ಕೆ ಸಂದೇಹನೇ ಇಲ್ಲ.

ಆತನ ಭಾಷೆಯಲ್ಲೇ ಉತ್ತರ ಕೊಡಬೇಕಾಗುತ್ತೆ.

ಇನ್ನು ಮೇಲೆ ಅಥಣಿಗೆ ಬಂದರೆ ಸುಮ್ಮನೆ ಬಂದು ಸುಮ್ಮನೆ ಹೋಗಬೇಕು.

ಒಂದು ವೇಳೆ ನಮ್ಮ ತಂದೆಯವರ ಬಗ್ಗೆ ಆಗಲಿ ಅಥವಾ ಕಾರ್ಯಕರ್ತರ ಬಗ್ಗೆ ಅಶ್ಲೀಲ ಪದಗಳನ್ನು ಬಳಸಿದರೆ, ಅವನಿಗಿಂತ ಕೆಟ್ಟ ಭಾಷೆ ಬಳಸಿ ಉತ್ತರ ಕೊಡಬೇಕಾಗುತ್ತೆ," ಎಂದು ಚಿದಾನಂದ ಸವದಿ ಎಚ್ಚರಿಕೆ ನೀಡಿ–ದರು.

ಸನ್ಮಾನ್ಯ ಲಕ್ಷ್ಮಣ ಸವದಿ ಅವರು ಯಾವಾಗ ಯಾರಿಗಾದರೂ ಮಾತನಾಡಿದರು ಸಹ 'ವಿರೋಧ ಪಕ್ಷದ ಸ್ನೇಹಿತರು' ಎಂದೇ ಪದ ಬಳಕೆ ಮಾಡುತ್ತಾರೆ. ಬಾಲಚಂದ್ರ ಜಾರಕಿಹೊಳಿ ಹಾಗೂ ಸತೀಶ ಜಾರಕಿಹೊಳಿ ಅವರು ಎಲ್ಲರಿಗೂ ಮರ್ಯಾದೆ ಕೊಟ್ಟು ಮಾತನಾಡುತ್ತಾರೆ.

ಆದರೆ ಈ ಪುಣ್ಯಾತ್ಮ ಅವರ (ಜಾರಕಿಹೊಳಿ) ಮನೆಯ ಮರ್ಯಾದೆಯನ್ನೇ ಕಳೆಯುತ್ತಿದ್ದಾನೆ.ದಯವಿಟ್ಟು ಅವರ ಸಹೋದರರಾದ ಬಾಲಚಂದ್ರ ಜಾರಕಿಹೊಳಿ ಮತ್ತು ಸತೀಶ್ ಜಾರಕಿಹೊಳಿ ಅವರು ಇವರನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು. ಇನ್ನೊಬ್ಬ ನಾಯಕರ ಜೊತೆ ಹೇಗೆ ಗೌರವದಿಂದ ಇರಬೇಕು ಎಂಬುದನ್ನ ಹೇಳಿಕೊಡಬೇಕು," ಎಂದು ಚಿದಾನಂದ ಸವದಿ ಮನವಿ ಮಾಡಿದರು.

ಅಥಣಿ ಜನ ಬುದ್ಧಿವಂತರಿದ್ದು, ಇಂತಹ ಕೆಟ್ಟ ನಡೆಗಳಿಗೆ ಮತ್ತು ಕೆಟ್ಟ ಭಾಷೆಗಳಿಗೆ ಮನ್ನಣೆ ಕೊಡುವುದಿಲ್ಲ.

ಸರಿಯಾದ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ಉತ್ತರ ಕೊಡುವುದನ್ನು ಇಲ್ಲಿನ ಪ್ರಜ್ಞಾವಂತ ಜನ ಬಲ್ಲರು ಎಂದು ಹೇಳಿದರು

**ಲಿಂಗಾಯತ ನಾಯಕರಿಗೆ ಒಗ್ಗಟ್ಟಿನ ಕರೆ:**

ಇಂದು ಲಿಂಗಾಯತ ಲಿಂಗಾಯತರಲ್ಲಿ ಜಗಳ ಹಚ್ಚಿ, ಒಂದೇ ಕ್ಷೇತ್ರದಲ್ಲಿ ಅಣ್ಣ ಒಬ್ಬ ಅಭ್ಯರ್ಥಿಯನ್ನು, ತಮ್ಮ ಒಬ್ಬ ಅಭ್ಯರ್ಥಿಯನ್ನು ಹಾಕಿ ಈ ರೀತಿ ಮಾಡಿ ನಮ್ಮ ನಮ್ಮಲ್ಲೇ ಜಗಳ ಹಚ್ಚುತ್ತಿದ್ದಾರೆ.

ಲಿಂಗಾಯತ ನಾಯಕರೆಲ್ಲರೂ ವೈಯಕ್ತಿಕ ಪ್ರತಿಷ್ಠೆಯನ್ನು ಬದಿಗಿಟ್ಟು ಎಲ್ಲರೂ ಒಗ್ಗಟ್ಟಾಗಬೇಕು," ಎಂದು ಯುವ ನಾಯಕ ಚಿದಾನಂದ ಸವದಿ ಒಗ್ಗಟ್ಟಿಗೆ ಕರೆ ನೀಡಿದರು.

# ಬರಡೋಲ ಗ್ರಾಮದ 12 ಜನರಿಗೆ ಪಿಂಚಣಿ ಪ್ರಮಾಣ ಪತ್ರ ವಿತರಣೆ



**ಚಡಚಣ :** ಬರಡೋಲ ಗ್ರಾಮದಲ್ಲಿ ಶನಿವಾರ ಉಪವಿಭಾಗಾಧಿಕಾರಿ ಇಂಡಿ ಇವರ ಆದೇಶದನ್ವಯ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿ ಸರಕಾರದ ಜನಕಲ್ಯಾಣ ಯೋಜನೆಗಳು ಗ್ರಾಮ ಮಟ್ಟದಲ್ಲಿ ಫಲಾನುಭವಿಗಳಿಗೆ ತಲುಪುವಲ್ಲಿ ಸಹಾಯಕವಾದ ಪಿಂಚಣಿ ಅದಾಲತ್ ಕಾರ್ಯಕ್ರಮ ಜರುಗಿತು.

ಚಡಚಣ ಉಪ ತಹಶೀಲದಾರ ಕೆ.ವಾಯ್. ಹೊಸಮನಿ

ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.ಈ ಸಂದರ್ಭದಲ್ಲಿ ಮಾತನಾಡಿದ ಅವರು ಸರಕಾರದಿಂದ ಬಡ ಹಾಗೂ ವಿಧವೆಯರು,ವಯೊವೃದ್ಧ ಮಹಿಳೆ ಅಥವಾ ಪುರುಷರು,ಸುಕನ್ಯೆಯರು,ವಿಕಲಚೇತನರಿಗೆ ಹೀಗೆ ಹಲವಾರು ಯೋಜನೆಗಳ ಸರಕಾರದ ಜನಕಲ್ಯಾಣ ಯೋಜನೆಗಳಲ್ಲಿ ಒಂದಾದ (ಮಾಶಾಸನ)ಪಿಂಚಣಿ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಆಗುತ್ತವೆ ಎಂದು ಹೇಳಿದರು. ಬರಡೋಲ ಗ್ರಾಮದಿಂದ ವಿವಿಧ ಯೋಜನೆಗಳಲ್ಲಿ 12 ಜನರು ನಮ್ಮ ಚಡಚಣ ತಹಶೀಲ್ದಾರ ಕಾರ್ಯಾಲಯಕ್ಕೆ ದಾಖಲೆ ಸಮೇತ ಅರ್ಜಿ ಸಲ್ಲಿಸಿದ್ದರು ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಅನುಮೋದನೆ ಯನ್ನು ಕೊಟ್ಟಿದ್ದಾರೆ ಅದರ ಫಲವಾಗಿ ಇಂದು ಪಿಂಚಣಿ ಅದಾಲತ್‌ನಲ್ಲಿ ವಿವಿಧ ಯೋಜನೆಗಳಲ್ಲಿ 12 ಫಲಾನುಭವಿಗಳನ್ನು ಆಯ್ಕೆಮಾಡಿ ಪಿಂಚಣಿ ಆದೇಶ ಪತ್ರವನ್ನು ನೀಡಲಾಗುತ್ತಿದೆ ಎಂದು ಉಪ ತಹಶೀಲದಾರ ಕೆ.ವಾಯ್.ಹೊಸಮನಿ ಹೇಳಿದರು.

ಈ ಸಂದರ್ಭದಲ್ಲಿ ಬರಡೋಲ ಗ್ರಾಮದ ಗಣ್ಯ ವ್ಯಕ್ತಿಗಳು ಮತ್ತು ಊರಿನ ಗ್ರಾಮಸ್ಥರ ಸಮ್ಮುಖದಲ್ಲಿ ಮತ್ತು ಪಿಂಚಣಿ ಅದಾಲತ್ ಕಾರ್ಯಕ್ರಮದಲ್ಲಿ 12 ಫಲಾನುಭವಿಗಳಿಗೆ ಪಿಂಚಣಿ ಪ್ರಮಾಣ ಪತ್ರ ನೀಡಲಾಯಿತು.

ಈ ಸಂದರ್ಭದಲ್ಲಿ ಬರಡೋಲ ಗ್ರಾ.ಪಂ.ಸದಸ್ಯ ಹಸನಸಾಬ ಬಾಗವಾನ,ವೆಂಕಟೇಶ ಕುಲಕರ್ಣಿ,ಚಡಚಣ ಕಂದಾಯ ನಿರಿಕ್ಷಕರಾದ ಗುರುಶಾಂತ ಮಾ ಬಿರಾದಾರ ಹಾಗೂ ಸಿಬ್ಬಂಧಿಗಳು, ಬರಡೋಲ ಗ್ರಾಮ ಆಡಳಿತ ಅಧಿಕಾರಿ ಶೀವಾಜಿ ಜಾಧವ, ಊರಿನ ಗ್ರಾಮಸ್ಥರು,ಹಿರಿಯರು ಇದ್ದರು.

# ದಾನಮ್ಮದೇವಿ ದೇವಸ್ಥಾನ 15ನೇ ಜಾತ್ರಾ ಮಹೋತ್ಸವ ಆಧ್ಯಾತ್ಮಿಕ ಪ್ರವಚನ

**ವಿಜಯಪುರ :** ಶಹರದ ಆನಂದ ನಗರದ ಶ್ರೀ ದಾನಮ್ಮದೇವಿ ದೇವಸ್ಥಾನದ 15ನೇ ಜಾತ್ರಾ ಮಹೋತ್ಸವ ಬರುವ ನವಂಬರ 6, 7 ಮತ್ತು 8 2025 ರಂದು ವಿಜೃಂಭಣೆಎಯಿಂದ ಜರುಗಲಿದೆ. ಅದರ ಪ್ರಮುಕ್ತ ಪೂರ್ವಭಾವಿಯಾಗಿ ಇದೇ ದಿನಾಂಕ 23–11–2025 ಗುರುವಾರ ದಿಂದ 6–11–2025 ರ ವರೆಗೆ ನಾಡಿನ ಹೆಸರಾಂತ ಪ್ರಖರ ವಾಗ್ಮಿಗಳಾದ ಶ್ರೀ ಮ.ನಿ.ಪ್ರ. ಅಭಿನವ ಮೃತ್ಯುಂಜಯ ಸ್ವಾಮಿಗಳು ಸಾ. ಮಣಕವಾಡ ಇವರ ಅಮೃತ ವಾಣಿಯಿಂದ ಜರುಗಲಿದ್ದು ಪ್ರತಿದಿನ ಸಾಯಂಕಾಲ 6–30 ರಿಂದ 8 ಗಂಟೆಯವರೆಗೆ ಶ್ರೀ ದಾನಮ್ಮದೇವಿ ದೇವಸ್ಥಾನ ಹತ್ತಿರ ಏರ್ಪಡಿಸಲಾಗಿದೆ.

ವಿಜಯಪುರ ನಗರದ ಭಕ್ತಾಧಿಗಳು ಸಾರ್ವಜನಿಕರು ಈ ಪ್ರವಚನ ಕಾರ್ಯಕ್ರಮದಲ್ಲಿ



ಭಾಗಿಯಾಗಬೇಕೆಂದು ಶ್ರೀ ದಾನಮ್ಮದೇವಿ ದೇವಸ್ಥಾನ

ಟ್ರಸ್ಟ ಕಮಿಟಿ ಅಧ್ಯಕ್ಷರಾದ ಅಪ್ಪು ಇಟ್ಟಂಗಿಯವರು ಪ್ರಕಟಣೆ ಮುಖಾಂತರ ಕೋರಿದ್ದಾರೆ.

# ಮಲ್ಲಗಂಬ ಸ್ಪರ್ಧೆಯಲ್ಲಿ ಮುಳವಾಡ ಗ್ರಾಮದ ಶಿವರಾಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಉತ್ತಮ ಪ್ರದರ್ಶನ

**ವಿಜಯಪುರ:** ಇತ್ತೀಚೆಗೆ ನಡೆದ ವಿಜಯಪುರ ಜಿಲ್ಲಾ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಮಲ್ಲಗಂಬ ಸ್ಪರ್ಧೆಯಲ್ಲಿ ಮುಳವಾಡ ಗ್ರಾಮದ ಶಿವರಾಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಉತ್ತಮ ಪ್ರದರ್ಶನ ನೀಡಿದರು. ಪ್ರಾಥಮಿಕ ಶಾಲಾ ವಿಭಾಗದ ವಿದ್ಯಾರ್ಥಿಗಳಿಂದ ಅಂ–ದರೆ 14 ವರ್ಷದ ಒಳಗಿನವ ಸ್ಪರ್ಧೆಯಲ್ಲಿ ಶಿವರಾಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಕು. ಮಹೇಶ ಚಿಮ್ಮಲಗಿ ಅದ್ಭುತ ಪ್ರದರ್ಶನ ನೀಡಿದ್ದಾನೆ. ಅಂದರೆ 90 ಸೆಕೆಂಡಿನಲ್ಲಿ 11 ಆಸನಗಳನ್ನು ಮಾಡಿ ಎಲ್ಲರು ಹುಬ್ಬೇರುಸುವಂತೆ ಮಾಡಿ, ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ



ವಿದ್ಯಾರ್ಥಿ ಎಂದು ಹೇಳಲು ಸಂತೋಷವಾಗುತ್ತದೆ.

ಇದೇ ತಿಂಗಳ ಕೊನೆಯಲ್ಲಿ ಗದಗದಲ್ಲಿ ನಡೆಯುವ ರಾಜ್ಯ ಮಟ್ಟದ ಮಲ್ಲಗಂಬ ಸ್ಪರ್ದೆಯಲ್ಲಿ ನಮ್ಮ ಮುಳವಾಡದ ವಿಜಯಪುರ ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾನೆ. ಈ ವಿದ್ಯಾರ್ಥಿಗೆ ರಾಜ್ಯ ಮಟ್ಟದಲ್ಲೂ ಜಯ ಸಿಗಲೆಂದು ಹಾರೈಸುವವರು. ಶಿವರಾಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಅಧ್ಯಕ್ಷರು ಮತ್ತು ಸರ್ವ ಸಿಬ್ಬಂದಿ ವರ್ಗ ಮತ್ತು ಎಸ್‌ಡಿಎಮ್.ಸಿಯ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು, ಹಾಗೂ ಗ್ರಾಮಸ್ಥರು. ಶುಭ ಹಾರೈಸಿದ್ದಾರೆ.

# ವ್ಯಕ್ತಿ ಕಾಣೆ: ಪತ್ತೆಗೆ ಸಹಕರಿಸಲು ಮನವಿ



**ಕೊಪ್ಪಳ** : ಕಾರಟಗಿ ತಾಲ್ಲೂಕಿನ ಸಿದ್ದಾಪುರ ಗ್ರಾಮದ 55 ವರ್ಷದ ಅಯ್ಯಪ್ಪ ತಂದೆ ಈರಪ್ಪ ಎಂಬ ವ್ಯಕ್ತಿ 2023 ರ ಅಕ್ಟೋಬರ್ 5 ರಂದು ಸಂಜೆ 4 ಗಂಟೆಗೆ ಮನೆಯಿಂದ ಹೊರಗೆ ಹೋಗಿದ್ದು, ಇದುವರೆಗೂ ಮರಳಿ ಮನೆಗೆ ಬಾರದೆ ನಾಪತ್ತೆಯಾಗಿದ್ದಾರೆ. ಈ ಕುರಿತು ಕಾರಟಗಿ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ: 202/2023 ಕಲಂ, ಮನುಷ್ಯ ಕಾಣೆ ಅಡಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ವ್ಯಕ್ತಿಯ ಚಹರೆ:

ವ್ಯಕ್ತಿಯು 4.8 ಅಡಿ ಎತ್ತರವಿದ್ದು, ದುಂಡು ಮುಖ, ಗೋಧಿ ಮೈಬಣ್ಣ,

ಸದೃಢ ಮೈಕಟ್ಟು ಹೊಂದಿದ್ದು, ನೆತ್ತಿಯ ಮೇಲೆ ಕೂದಲು ಇರುವುದಿಲ್ಲ. ಕಾಣೆಯಾದಾಗ ಬಿಳಿ ಬಣ್ಣದ ಶರ್ಟ್, ಗ್ರೇ ಬಣ್ಣದ ಪ್ಯಾಂಟ್ ಮತ್ತು ಬಿಳಿ ಬಣ್ಣದ ಬನಿಯನ್ ಧರಿಸಿದ್ದರು. ಕನ್ನಡ ಭಾಷೆ ಮಾತ್ರ ಮಾತನಾಡುತ್ತಾರೆ.

ಮೇಲ್ಕಂಡ ಚಹರೆಯ ವ್ಯಕ್ತಿಯ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಕೊಪ್ಪಳ ಪೊಲೀಸ್ ಕಂಟ್ರೋಲ್ ರೂಮ್ ನಂ. 08539–230111,

ಕೊಪ್ಪಳ ಜಿಲ್ಲಾ ಪೊಲೀಸ್ ಅಧಿಕ್ಷಕರ ಕಚೇರಿ: 08539–230222, ಗಂಗಾವತಿ ಪೊಲೀಸ್ ಉಪ ವಿಭಾಗಾಧಿಕಾರಿ ಕಚೇರಿ: 08533–230853, ಕಾರಟಗಿ ಠಾಣೆಯ ಆರಕ್ಷಕ ನಿರೀಕ್ಷಕರ ಮೊ.ಸಂ.9480803754 ಮತ್ತು **ದೂ.ಸಂ.**: 08533–275331 ಅಥವಾ **ಇ–ಮೇಲ್**: karatagikpl@ksp.gov.in ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಕಾರಟಗಿ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಪ್ರಕಟಣೆ ಕೋರಿದ್ದಾರೆ.

# ಮಹಿಳೆ ಕಾಣೆ: ಪತ್ತೆಗೆ ಸಹಕರಿಸಲು ಮನವಿ



**ಕೊಪ್ಪಳ** : ಕಾರಟಗಿ ತಾಲ್ಲೂಕಿನ ಬರಗೂರ ಗ್ರಾಮದ ನಿವಾಸಿ 25 ವರ್ಷದ ಬಸಮ್ಮ ಗಂಡ ಯಲ್ಲಪ್ಪ ಎಂಬ ಮಹಿಳೆಯು 2023 ರ ಅಕ್ಟೋಬರ್ 26 ರಂದು ಬೆಳಿಗ್ಗೆ 8.30 ಗಂಟೆಯಿಂದ ಕಾಣೆಯಾಗಿದ್ದು, ಇದುವರೆಗೂ ಮರಳಿ ಮನೆಗೆ ಬಾರದೆ ನಾಪತ್ತೆಯಾಗಿದ್ದಾರೆ. ಈ ಕುರಿತು ಕಾರಟಗಿ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ: 217/2023 ಕಲಂ, ಮಹಿಳೆ ಕಾಣೆ ಅಡಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ಮಹಿಳೆಯ ಚಹರೆ:

ಮಹಿಳೆಯು 5.2 ಅಡಿ ಎತ್ತರವಿದ್ದು, ಉದ್ದವಾದ ಮುಖ, ಎಣ್ಣೆಕೆಂಪು ಮೈಬಣ್ಣ, ಉದ್ದ ಮೂಗು, ಸಾಧಾರಣ ಮೈಕಟ್ಟು ಹೊಂದಿದ್ದು, ತಲೆಯಲ್ಲಿ ಕಪ್ಪು ಕೂದಲು ಹೊಂದಿದ್ದಾರೆ. ಕಾಣೆಯಾದಾಗ ಕೆಂಪು ಬಣ್ಣದ ನೈಟಿ ಧರಿಸಿದ್ದರು. ಕನ್ನಡ ಭಾಷೆ ಮಾತ್ರ ಮಾತನಾಡುತ್ತಾರೆ.

ಮೇಲ್ಕಂಡ ಚಹರೆಯ ಮಹಿಳೆಯ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಕೊಪ್ಪಳ ಪೊಲೀಸ್ ಕಂಟ್ರೋಲ್ ರೂಮ್ ನಂ. 08539–230111, ಕೊಪ್ಪಳ ಜಿಲ್ಲಾ ಪೊಲೀಸ್ ಅಧಿಕ್ಷಕರ ಕಚೇರಿ: 08539–230222, ಗಂಗಾವತಿ ಪೊಲೀಸ್ ಉಪ ವಿಭಾಗಾಧಿಕಾರಿ ಕಚೇರಿ: 08533–230853, ಕಾರಟಗಿ ಠಾಣೆಯ ಆರಕ್ಷಕ ನಿರೀಕ್ಷಕರ ಮೊ.ಸಂ.9480803754 ಮತ್ತು ದೂ.ಸಂ.: 08533–275331 ಅಥವಾ ಇ–ಮೇಲ್: karatagikpl@ksp.gov.in ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಕಾರಟಗಿ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಪ್ರಕಟಣೆ ಕೋರಿದ್ದಾರೆ.

# ಆಲಮಟ್ಟಿ: ವಿದ್ಯುತ್ ತಗುಲಿ ವಿದ್ಯಾರ್ಥಿ ಸಾವು



**ಆಲಮಟ್ಟಿ**: ಆಡುಗಳ ಆಹಾರಕ್ಕಾಗಿ ಗಿಡದ ಎಲೆ ಹರಿಯಲು ಹೋಗಿ ಗಿಡದ ಮೇಲೆ ಹತ್ತಿದ್ದ ಯುವಕನಿಗೆ ವಿದ್ಯುತ್ ತಗುಲಿ ನೆಲಕ್ಕೆ ಬಿದ್ದು ಮೃತಪಟ್ಟಿರುವ ಘಟನೆ ಭಾನುವಾರ, ಇಲ್ಲಿಯ ಎಂ.ಎಚ್.ಎಂ. ಪ್ರೌಢಶಾಲೆಯ ಎದುರಿನ ಪ್ರದೇಶದಲ್ಲಿ ನಡೆದಿದೆ.

ಆಲಮಟ್ಟಿಯ ನಿವಾಸಿ ಅಭಿಷೇಕ ಅಶೋಕ ಪಠಾಣ–ಕರ (18) ಮೃತ ಯುವಕ. ಈತ ಇಲ್ಲಿಯ ಎಂಎಚ್–ಎಂ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ವರ್ಷದ ವಿದ್ಯಾರ್ಥಿಯಾಗಿದ್ದ. ಅಭಿಷೇಕ ಹಾಗೂ ಆತನ ಮಿತ್ರ ಆಡಿಗಾಗಿ ತಪ್ಪಲು ಹರಿಯಲು ಹೋಗಿದ್ದರು.

ಗಿಡ ಏರಿದ್ದ ಅಭಿಷೇಕ, ತಪ್ಪಲು ಹರಿಯಲು ಗಿಡದ ಟೊಂಗೆ ಮುರಿದಾಗ, ಆ ಟೊಂಗೆ ಗಿಡದ ಬಳಿ ಹಾದು ಹೋಗಿದ್ದ ವಿದ್ಯುತ್ ಹೈಟೆನ್ಶನ್ ತಂತಿಗೆ ತಗುಲಿ ವಿದ್ಯುತ್ ಸ್ಪರ್ಶವಾಯಿತು.

ಗಿಡದಿಂದ ನೆಲಕ್ಕೆ ಬಿದ್ದು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅಭಿಷೇಕನನ್ನು ತಕ್ಷಣ ನಿಡಗುಂದಿ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆಯೇ ಆತ ಮೃತಪಟ್ಟ, ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಗಣಿ ಮತ್ತು ಭೂ ವಿಜ್ಞಾನ ಇಲಾಖೆ: ಅಧಿಕಾರಿಯಿಂದ ಸ್ಪಷ್ಟೀಕರಣ

**ಕೊಪ್ಪಳ** : ಕೊಪ್ಪಳ ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಎಲ್ಲಾ 10 ಅಧಿಕಾರಿಗಳನ್ನು ವರ್ಗಾವಣೆ ಮಾಡುವಂತೆ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಮುಖ್ಯಮಂತ್ರಿಗಳ ಪತ್ರ ಬರೆದ ಕುರಿತು ವಿವಿಧ ಮಾಧ್ಯಮಗಳು ಹಾಗೂ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಗೊಂಡ ವಿಷಯಕ್ಕೆ ಪೂರಕವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ವರ್ಗದಿಂದ ಬಂದಿದೆ ಎನ್ನಲಾದ ಸಹಿ ಇಲ್ಲದ ಅನಾಮಧೇಯ ಪತ್ರದ ಕುರಿತಂತೆ ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಪುಷ್ಪಲತಾ ಕವಲೂರ ಅವರು ಸ್ಪಷ್ಟೀಕರಣ ನೀಡಿದ್ದಾರೆ.

ಅಕ್ಟೋಬರ್ 18 ರಂದು ಶಾಸಕ ಬಸವರಾಜ ರಾಯರೆಡ್ಡಿ ಅವರು ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕಚೇರಿಯ ಎಲ್ಲಾ 10 ಅಧಿಕಾರಿಗಳನ್ನುವರ್ಗಾವಣೆ ಮಾಡುವಂತೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದ ಬಗ್ಗೆ ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಬಿತ್ತರಗೊಂಡಿದ್ದು. ಅದಕ್ಕೆವಿಮುಖವಾಗಿ ಇಲಾಖೆಯ ಅಧಿಕಾರಿ ವರ್ಗದಿಂದ ಬಂದಿದೆ ಎಂಬಲಾದ ಹಾಗೂ ಸಹಿ ಇಲ್ಲದ ಅನಾಮಧೇಯ ಮನವಿ ಪತ್ರದಲ್ಲಿ 20 ಅಂಶಗಳ ಕುರಿತು ಪ್ರಶ್ನೆಗಳನ್ನು ನಮೂದಿಸಿದ್ದು,

ಈ ಬಗ್ಗೆಯೂ ವಿವಿಧ ಸುದ್ದಿ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಹರಿದಾಡಿತ್ತು.

ಆದರೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಬಂದಿದೆ ಎನ್ನಲಾದ ಹಾಗೂ ಸಹಿ ಇಲ್ಲದ ಅನಾಮಧೇಯ ಮನವಿ ಪತ್ರಕ್ಕೂ ಇಲಾಖೆಗೂ ಯಾವುದೇ ಸಂಬಂಧವಿಲ್ಲ ಮತ್ತು ಈ ವಿಷಯವನ್ನು ಜಿಲ್ಲಾ ಕಚೇರಿಯಿಂದ ಹೊರಡಿಸಿರುವುದಿಲ್ಲ ಎಂದು ಇಲಾಖೆಯ ಹಿರಿಯ ಭೂ ವಿಜ್ಞಾನಿ ಪ್ರಕಟಣೆ ಮೂಲಕ ಸ್ಪಷ್ಟೀಕರಣ ನೀಡಿದ್ದಾರೆ.

# ಹಳಿಯಾಳ ಆರ್‌ಸೆಟಿ ಸಂಸ್ಥೆ: ತರಬೇತಿಗೆ ಅರ್ಜಿ ಆಹ್ವಾನ

**ಕೊಪ್ಪಳ** : ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ

ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ಸಂಸ್ಥೆಯಿಂದ ಉಚಿತವಾಗಿ ಹೊಲಿಗೆ ಮತ್ತು ಬ್ಯೂಟಿ ಪಾರ್ಲರ್ ಮ್ಯಾನೇಜ್‌ಮೆಂಟ್ ತರಬೇತಿಗಳಿಗಾಗಿ ಆಸಕ್ತ ಗ್ರಾಮೀಣ ಭಾಗದ ನಿರುದ್ಯೋಗಿ ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

18 ರಿಂದ 50 ವಯೋಮಾನದ ನಿರುದ್ಯೋಗಿ ಯುವತಿಯರಿಗಾಗಿ ನವೆಂಬರ್ ತಿಂಗಳಲ್ಲಿ 35 ದಿನಗಳ ಬ್ಯೂಟಿ ಪಾರ್ಲರ್ ಮ್ಯಾನೇಜ್‌ಮೆಂಟ್ ತರಬೇತಿ ಹಾಗೂ ಮಹಿಳೆಯರಿಗಾಗಿ 31 ದಿನಗಳ ಹೊಲಿಗೆ ತರಬೇತಿಗಳನ್ನು ಉಚಿತವಾಗಿ ನೀಡಲಾಗುವುದು.

ಈ ತರಬೇತಿಗಳು ಸ್ವ–ಉದ್ಯೋಗ ಪ್ರಾರಂಭಿಸಿ, ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗಲಿವೆ.

ತರಬೇತಿಯು ಊಟ ಮತ್ತು ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿದ್ದು, ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ತರಬೇತಿಯಲ್ಲಿ ಕೌಶಲ್ಯ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ ಹಾಗೂ ಬ್ಯಾಂಕಿನಿಂದ ಸಾಲ ಪಡೆದು ಸ್ವ–ಉದ್ಯೋಗ ಪ್ರಾರಂಭಿಸಲು ಬೇಕಾಗುವ ಜ್ಞಾನ, ಸರಕಾರಿ ಯೋಜನೆಗಳ ಮತ್ತು ಯೋಜನಾ ವರದಿ ತಯಾರಿಕೆ ಇನ್ನಿತರ ಮಾಹಿತಿಗಳನ್ನು ನೀಡಲಾಗುತ್ತದೆ.

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅಕ್ಟೋಬರ್ 31 ಕೊನೆಯ ದಿನಾಂಕವಾಗಿದ್ದು, ಆಸಕ್ತರು ಪ್ರಶಾಂತ ಬಡ್ಡಿ, ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಸಂಪರ್ಕಿಸಲು ಹಾಗೂ ಸಂಸ್ಥೆಯ ವಾಟ್ಸಾಪ್ ನಂಬರ್ 9483485489ಗೆ ಊಖ ಎಂದು ಸಂದೇಶ ಕಳುಹಿಸುವುದರ ಮುಖಾಂತರ ತಮ್ಮ ಹೆಸರನ್ನು ನೋಂದಾಯಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ದೂರವಾಣಿ ಸಂಖ್ಯೆ: 9482188780, 9844796998, ಹಾಗೂ 9632225123 ಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

# ವೋಟ್ ಚೋರಿ ವಿರುದ್ಧ ಅಭಿಯಾನಕ್ಕೆ ಚಾಲನೆ.



**ಮುಧೋಳ**: ಬಿಜೆಪಿಯಿಂದ ಪಕ್ಷದಿಂದಾಗುತ್ತಿರುವ ವೋಟ್ ಚೋರಿಯ ವಿರುದ್ಧ ರಾಷ್ಟ್ರೀಯ ಮಟ್ಟದ ಕಾಂಗ್ರೆಸ್ ಪಕ್ಷದ ಅಭಿಯಾನದ ಭಾಗವಾಗಿ, ಅಕ್ಟೋಬರ್ 21 ರಂದು ನಗರದಲ್ಲಿ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್. ಬಿ. ತಿಮ್ಮಾಪೂರ ಅವರ ನೇತೃತ್ವದಲ್ಲಿ ವೋಟ್ ಚೋರಿ ( ಮತ ಕಳವು ) ವಿರುದ್ಧ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಸಚಿವರು ಮತದಾನದ ಮಹತ್ವದ ಬಗ್ಗೆ ಜನರಿಗೆ ತಿಳಿಸುತ್ತಾ,

ಚುನಾವಣಾ ಪ್ರಕ್ರಿಯೆಯಲ್ಲಿ ಆಗುತ್ತಿರುವ ಸುಳ್ಳು ಮತ್ತು ಅನ್ಯಾಯವನ್ನು ತಡೆಯುವಂತೆ ಕರೆ ನೀಡಿದರು.

ನಮ್ಮ ಜನತಂತ್ರದ ಮೂಲವೇ ವೋಟ್. ಆದರೆ ಕೆಲವರು ಅದನ್ನು ಕಳುವು ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಈ ಅಭಿಯಾನದ ಮೂಲಕ ನಾವು ಸಹಿಗಳನ್ನು ಸಂಗ್ರಹಿಸಿ, ಚುನಾವಣಾ ಆಯೋಗಕ್ಕೆ ಸಲ್ಲಿಸುತ್ತೇವೆ. ಪ್ರತಿಯೊಬ್ಬರೂ ಈ ಹೋರಾಟದಲ್ಲಿ ಭಾಗವಹಿಸಿ, ನಮ್ಮ ಮತದಾನದ ಅಧಿಕಾರವನ್ನು ರಕ್ಷಿಸೋಣ" ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವೋಟ್ ಚೋರಿಯ ವಿರುದ್ಧ ಜಾಗೃತಿ ಮೂಡಿಸುವಂತೆ ಜನರಿಗೆ ಮಾಹಿತಿ ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ ಅಧ್ಯಕ್ಷ ಎಸ್. ಜಿ. ನಂ–ಜಯ್ಯನಮಠ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಸದುಗೌಡ ಪಾಟೀಲ,

ಅಶೋಕ ಕಿವಡಿ ವಕೀಲರು, ರಾಘು ಮೊಕಾಶಿ, ಧುರೀಣ–ರಾದ ಉದಯಸಿಂಗ ಫಡತಾರೆ, ಇಸಾಕ್ ಎಚ್. ಅಂಬಿ ನಗರಸಭೆ ಅಧ್ಯಕ್ಷೆ ಸುನಂದಾ ತೇಲಿ, ಪ್ರಕಾಶ ಉತ್ತೂರ,

ಡಾ. ಸತೀಶ ಮಲಘಾಣ, ದಾನೇಶ ತಡಸಲೂರ, ಚಿನ್ನು ಅಂಬಿ, ಕೊಣ್ಣೂರ ಸೇರಿದಂತೆ ಇನ್ನೂ ಅನೇಕ ಕಾರ್ಯಕರ್ತರು, ಅಭಿಮಾನಿಗಳು ಹಾಜರಿದ್ದರು.

# ಕಿತ್ತೂರು ಚೆನ್ನಮ ಕನ್ನಡ ಮಣ್ಣಿನ ವೀರರಾಣಿ: ಡಾ. ವೀರಣ್ಣ ಚರಂತಿಮಠ



**ಬಾಗಲಕೋಟೆ** : ಬ್ರಿಟಿಷರನ್ನು ಸದೆಬಡಿದು ವಿಜಯದ ಕಹಳೆ ಮೊಳಗಿಸಿದ ವೀರ ರಾಣಿ, ಕನ್ನಡ ಮಣ್ಣಿನ ವೀರ ಮಹಿಳೆಯರಲ್ಲಿ ಅಗ್ರಪಂಕ್ತಿಗೆ ಸೇರಿರುವ ಕಿತ್ತೂರ ಚೆನ್ನಮ್ಮನವರ ಶೌರ್ಯ ಎಂದೆಂದಿಗೂ ಸ್ಮರಣಿಯವಾಗಿದೆ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು. ನಗರದ ಶಿವಾನಂದ ಜೀನನಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಾರ್ಟಿ ಹಮ್ಮಿಕೊಂಡ ಕಿತ್ತೂರ ಚೆನ್ನಮ್ಮನ ಜಯಂತಿ ಆಚರಣೆ ನಿಮಿತ್ಯ ಅವರ ಭಾವಚಿತ್ರಕ್ಕೆಪುಷ್ಪಾಂಜಲಿಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಿ ಮಾತನಾಡಿದ ಅವರು ದೇಶದ ಜನರ ಮನಸ್ಸಿನಲ್ಲಿ ಸ್ವಾತಂತ್ರ್ಯದ ಬೀಜಗಳನ್ನು ಬಿತ್ತಿದ ಪ್ರಮುಖ ಮಹಿಳೆಯರಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಕೂಡ ಒಬ್ಬರು, ಚೆನ್ನಮ್ಮ ಜನರು ಸ್ವತಂತ್ರರಾಗಿರಬೇಕು ಮತ್ತು ಸ್ವಾಭಿಮಾನದಿಂದ ತಮ್ಮ ಜೀವನವನವನ್ನು ನಡೆಸಬೇಕೆಂದು ಬಯಸಿದ್ದರು, ಅವರ ಹೋರಾಟದ ಜೀವನ ಎಲ್ಲರಿಗೂ ಆದರ್ಶ ಎಂದರು.

ಪ್ರಸ್ತಾವಿಕವಾಗಿ ಮಾತನಾಡಿ ಶಿವಾನಂದ ಟವಳಿ ಕಿತ್ತೂರ ಚೆನ್ನಮ್ಮ ಜೀವನ ಚರಿತ್ರೆಯನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷೆ ಸವಿತಾ ಲಂಕೆನ್ನವರ, ಉಪಾಧ್ಯಕ್ಷೆ ಶೋಭಾರಾವ, ಬಸವರಾಜ ಯಂಕಂಚಿ, ಸತ್ಯನಾರಾಯಣ ಹೆಮಾದ್ರಿ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಶ್ರೀಧರ ನಾಗರಬೆಟ್ಟ, ಗುಂಡುರಾವ ಶಿಂಧೆ, ಪಂಚಮಸಾಲಿಸಮಾಜದ ಜಿಲ್ಲಾಧ್ಯಕ್ಷ ರವಿ ಪಟ್ಟಣದ, ಉಪಾಧ್ಯಕ್ಷ ಶಂಕರ ಅರಷಿಣಗುಡಿ, ಸಂತೋಷ ಜಕಾತಿ, ಪರಶುರಾಮ ಮುಳಗುಂದ, ಸಿದ್ದಣ್ಣ ಹಂಪನಗೌಡರ, ರಾಮಣ್ಣ ಜುಮನಾಳ, ಆನಂದ ಕೊಟಗಿ, ರವಿ ಧಾಮಜಿ, ಸಂಗಣಗೌಡ ಗೌಡರ, ಪ್ರಶಾಂತ ಕಗ್ಗೋಡ, ಈರಣ್ಣ ಕಲಬುರಗಿ, ನೀಲಪ್ಪ ಬೇವೂರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಿ: ಪಾಟೀಲ



**ಕಲಾದಗಿ** : ಮುಂಬರುವ ಚುನಾವಣೆಗಳಿಗೆ ಕಾಂಗ್ರೆಸ್ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಬೇಕು ಎಂದು ಶಾಸಕ ಜೆ.ಟಿ.ಪಾಟೀಲ ಹೇಳಿದರು.

ಗ್ರಾಮದ ಹಣ್ಣು ಬೆಳೆಗಾರರ ವಿದ್ಯಾಸಂಸ್ಥೆಯ ಚಿಕ್ಕುತೋಟದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕೇಂದ್ರ ಸರ್ಕಾರದ ವಿರುದ್ಧ ನಡೆದ ಮತಗಳ ಕಳ್ಳತನ ವಿರೋಧಿಸಿ ನಡೆದ ಸಹಿ ಸಂಗ್ರಹ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನಿಷ್ಠಾವಂತ ಕಾರ್ಯಕರ್ತರನ್ನು ಆಯ್ಕೆ ಮಾಡಬೇಕು. ಯತ್ನಟ್ಟಿ ಗ್ರಾಮದಲ್ಲಿ 50 ಕೊಟ್ಟಿ ಮತದಾರರು ಇದ್ದಾರೆ ಎಂದರು.

ಈಗಾಗಲೇ ಮುಳುಗಡೆ ಸಂತ್ರಸ್ತರ ಸರ್ವೆ ಕಾರ್ಯ ನಡೆಯುತ್ತಿದೆ. ಯುಕೆಪಿ ಮೂರನೇ ಹಂತದ ಯೋಜನೆಯನ್ನು ನಮ್ಮ ಸರ್ಕಾರ ಮೂರು ವರ್ಷದ ಅವಧಿಯೊಳಗೆ ಮುಗಿಸಲಿದೆ ಎಂದರು.

ಸಿದ್ದರಾಮಯ್ಯ ಸರ್ಕಾರ ಪಂಚ ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ. ಕೇಂದ್ರದ ಬಿಜೆಪಿ ಸರಕಾರ ಮತ ಕಳ್ಳತನದಲ್ಲಿ ತೊಡಗಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಸಂಶಿ, ಕೆಪಿಸಿಸಿ ಉಪಾಧ್ಯಕ್ಷ ಎಂ.ಬಿ.ಸೌದಾಗರ, ಮುಖಂಡರಾದ ಸಂಗಣ್ಣ ಮುಧೋಳ, ಸಿದ್ದಣ್ಣ ಛಬ್ಬಿ, ಪಾಂಡು ಪೊಲೀಸ್, ಫಕೀರಪ್ಪ ಬಿಸಾಳೆ,ಆರ್. ಆರ್.ತುಂಬರಮಟ್ಟಿ, ಬಿ. ಎಲ್. ನಾವಲಗಿ, ಅಶೋಕ ಕೊಪ್ಪದ, ಹಸನ ಅಹಮದ್ ರೋಣ, ರಫೀಕಸಾಬ ಬೇಪಾರಿ ಮುಂತಾದವರು ಇದ್ದರು.

## ಮರಿಯಮ್ಮದೇವಿ, ಸೇವಾಲಾಲ ಮಹಾರಾಜರ ನೂತನ ದೇವಸ್ಥಾನ,

# ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ



**ಕಲಬುರಗಿ** : ಶಹಾಬಾದ ರಸ್ತೆಯ ಶ್ರೀ ಸೇವಾಲಾಲ ನಗರ, ನೃಪತುಂಗ ಕಾಲೋನಿ ಹತ್ತಿರ ಶ್ರೀ ಮರಿಯಮ್ಮ ದೇವಿ ಮತ್ತು ಶ್ರೀ ಸೇವಾಲಾಲ ಮಹಾರಾಜರ ದೇವಸ್ಥಾನದ ಶ್ರೀ ಮರಿಯಮ್ಮದೇವಿ ಮತ್ತು ಶ್ರೀ ಸೇವಾಲಾಲ ಮಹಾರಾಜರ ನೂತನ ದೇವಸ್ಥಾನ, ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯಕ್ರಮ ಹಾಗೂ ಧಾರ್ಮಿಕ ಕಾರ್ಯಕ್ರಮವನ್ನು ಮಠಾಧಿಶರು, ಗಣ್ಯರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸುಕ್ಷೇತ್ರ ಮುಗಳನಾಗಾವಿಯ ಪರಮ ಪೂಜ್ಯ ಶ್ರೀ ಷ. ಬ್ರ ಅಭಿನವ ಸಿದ್ದಲಿಂಗ ಶಿವಾಚಾರ್ಯರು, ಪರಮ ಪೂಜ್ಯ ಶ್ರೀ ಪರ್ವತಲಿಂಗ ಪರಮೇಶ್ವರ ಮಹಾರಾಜರು, ಪರಮ ಪೂಜ್ಯ ಶ್ರೀ ಜೇಮಸಿಂಗ್ ಮಹಾರಾಜರು,

ಪರಮ ಪೂಜ್ಯ ಶ್ರೀ ಬಳಿರಾಮ ಮಹಾರಾಜರು, ಪರಮ ಪೂಜ್ಯ ಶ್ರೀ ದತ್ತ ದಿಗಂಬರ ಶರಣ ಶಂಕರಲಿಂಗ ಮಹಾರಾಜರು, ಪರಮ ಪೂಜ್ಯ ಶ್ರೀ ಮುರಾಹಲ ಮಹಾರಾಜರು, ಪರಮ ಪೂಜ್ಯ ಮಾತೋಶ್ರೀ ಲತಾದೇವಿ, ಪರಮ ಪೂಜ್ಯ ಶ್ರೀ ಸೋಮನಾಥ ಮಹಾರಾಜರು, ಪರಮ ಪೂಜ್ಯ ಮಾತೋಶ್ರೀ ಕಲಾವತಿದೇವಿ, ಪರಮ ಪೂಜ್ಯ ಶ್ರೀ ಅನೀಲ ಮಹಾರಾಜರು,

ಶಾಸಕರಾದ ಬಸವರಾಜ ಮತ್ತಿಮೂಡ, ಅಲ್ಲಮ ಪ್ರಭು ಪಾಟೀಲ, ಮಾಜಿ ಸಚಿವ ರೇವುನಾಯಕ ಬೆಳಮಗಿ, ಮಾಜಿ ಸಂಸದರಾದ ಉಮೇಶ ಜಾಧವ, ಹರಿಬಾ ರಾಠೋಡ, ಕೆನಬ್ರಿಡ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ನವಶಾದ್ ಎನ್. ಇರಾನಿ, ಮಾಜಿ ಸಚಿವ ಬಾಬುರಾವ ಚವ್ಹಾಣ, ಶ್ರೀ ಸೇವಾಲಾಲ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಸುಭಾಷ ಹೆಚ್ ಚವ್ಹಾಣ ಹಾಗೂ ಉಪಾಧ್ಯಕ್ಷ ರಾಜು ಎಮ್.ಚವ್ಹಾಣ (ಆರೆಮ್‌ಸಿ) ಸೇರಿದಂತೆ ಶ್ರೀ ಸೇವಾಲಾಲ ದೇವಸ್ಥಾನ ಟ್ರಸ್ಟ್‌ನ ಸದಸ್ಯರು, ರಾಜಕಿಯ ಮುಖಂಡರು, ಬಡಾವಣೆಯ ಮುಖಂಡರು, ಮಹಿಳೆಯರು, ಯುವಕರು ಇದ್ದರು.

# ಸಕ್ಕರೆ ಕಾರ್ಖಾನೆ ಮಾಲಿಕರು ಲಾಭದಲ್ಲಿದ್ದು ಕಬ್ಬು ಬೆಳೆಗಾರರು ಆತ್ಮಹತ್ಯೆ ಒಂದೇ ದಾರಿಯಾಗಿದೆ: ಕೂಡಲೇ ಸಭೆ ಕರೆದು ಕಬ್ಬಿಗೆ ದರ ಇತ್ಯರ್ಥ ಪಡೆಸಿ, ಇಲವಾದಲ್ಲಿ ಅನಿರ್ಧಿಷ್ಟ ಹೋರಾಟ

**ವಿಜಯಪುರ** : 2025–26 ನೇ ಸಾಲಿನ ಕಬ್ಬಿನ ದರ ನಿಗದಿ, ರೈತರಿಗೆ ಆಗುತ್ತಿರುವ ಮೋಸದ ಕುರಿತು ಹಾಗೂ ಇನ್ನು ಅನೇಕ ವಿಷಯಗಳ ಕುರಿತು ವಾಡಿಕೆಯಂತೆ ಪ್ರತಿವರ್ಷದಂತೆ ಚರ್ಚೆ ಮಾಡಲು ಜಿಲ್ಲಾಧಿಕಾ–ರಿಗಳ ನೇತೃತ್ವದಲ್ಲಿ ವಿಜಯಪುರ, ಬೆಳಗಾವಿ, ಬಾಗಲಕೋಟ ಸೇ–ರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 2ಸುತ್ತಿನ ಸಭೆ ಮಾಡಿ 74ಕಾರ್ಖಾನೆ ಮಾಲಿಕರಿಗೆ ಕಾಲಾವಕಾಶ ನೀಡಿ ನವೆಂಬರ್ 1 ರ ಒಳಗಾಗಿ ಎಫ್.ಆರ್.ಪಿ ಹೊರತುಪಡಿಸಿ ಹೆಚ್ಚಿಗೆ ಸಾಧ್ಯವಾಗುವಷ್ಟು ದರ ಘೋಷಿಸುವಂತೆ ನಿರ್ಣಯಿಸಲಾಗಿತ್ತು. ಈ ಮುಂಚೆ ಮಾನ್ಯ ಮುಖ್ಯಮಂತ್ರಿಗಳು ನವೆಂಬರ್ 1 ರ ನಂತರ ಎಲ್ಲಾ ಕಾರ್ಖಾನೆಗಳು ಕಬ್ಬು ನು–ರಿಸಲು ಆದೇಶ ಹೊರಡಿಸಿದ್ದರು, ಇದನ್ನು ಬದಲಿಸಿ ಏಕಾಏಕಿ 10 ದಿನ ಮುಂಚೆ ಅಕ್ಟೊಬರ 20 ರ ನಂತರ ಕಾರ್ಖಾನೆ ಪ್ರಾರಂಭ ಮಾಡುವಂತೆ ಮತ್ತೆ ಆದ–ೇಶ ಹೊರಡಿಸಿ ರೈತ ವಿರೋಧಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಮತ್ತೊಮ್ಮೆ ಸಾಭಿತು ಪಡೆಸಿದ್ದಾರೆ, ಇದಕ್ಕೆ ಬೆಂಬಲವಾಗಿ ನಮ್ಮವರೇ ಆದರೂ ಕಾರ್ಖಾನೆ ಮಾಲಿಕರ ಪರವಾಗಿ ಕಬ್ಬು ಹಾಗೂ ಸಕ್ಕರೆ ಸಚಿವರು ಬೆಂಬಲಿಸಿ ಆದ–ೇಶವನ್ನು ಹೊರಡಿಸಿದ್ದಾರೆ.

ಬೆಂಬಲಬೆಲೆ, ತೂಕದಲ್ಲಿ ಮೊಸ, ಇಳುವರಿಯಲ್ಲಿ ಮೊಸ, ಸಮಯಕ್ಕೆ ಸರಿಯಾಗಿ ಬಾಕಿ ಬಿಲ್ ಹಾಕದಿರುವುದು ಸೇರಿದಂತೆ ಹಲವಾರು ಗಂಭಿರ ವಿಷಯಗಳ ಚರ್ಚೆ ನಂತರವೇ ಕಾರ್ಖಾನೆ ಪ್ರಾರಂಭಿಸಿಬೇಕು,

ಕನಿಷ್ಟ ಒಂದು ಟನ್ ಕಬ್ಬಿಗೆ ಕಟಾವು ಮತ್ತು ಸಾಗಾಣಿಯನ್ನು ಹೊರತುಪಡಿಸಿ 3500 ಆದ–ರೂ ಕೊಡಲೇ ಬೇಕು, ಮೊದಲು ಕಬ್ಬಿನಿಂದ ಸಕ್ಕರೆ ಮಾತ್ರ ತಾಯಾರಾಗುತ್ತಿತ್ತು ಈಗ 7–8 ಉಪಉತ್ಪನ್ನಗಳು ಸಿದ್ದವಾಗಿ ಸಕ್ಕರೆ ಕಾರ್ಖಾನೆ ಮಾಲಿಕರು ಒಳ್ಳೆಯ ಲಾಭದಲ್ಲಿದ್ದು,

ಇಂದಿನ ಕಾಸ್ಟ ಆಫ್ ಕಲ್ಟಿವೇಷನ ಪ್ರಕಾರ ಒಂದು ಎಕರೆ ಕಬ್ಬು ಬೆಳೆದ ರೈತ 30 ಸಾವಿರ ನಷ್ಟದಲ್ಲಿದ್ದಾನೆ, ಆದರೆ ಸರಿಯಾದ ಬೆಲೆ ಸಿಗದೇ ಕಬ್ಬು ಬೆಳೆಗಾರರು ಮಾತ್ರ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸೇರಿದಂತೆ ವಿಜಯಪುರ ಜಿಲ್ಲೆಯ ಸಮಸ್ತ ಕಬ್ಬು ಬೆಳೆಗಾರರು ಹಾಗೂ ರೈತರು ಸೇರಿಕೊಂಡು ಜಿಲ್ಲಾಧಿಕಾ–ರಿಗಳ ಕಚೇರಿ, ಸಚಿವರಾದ ಶಿವಾನಂದ ಪಾಟೀಲರ ಮನೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ.ಪಾಟೀಲರ ಮನೆ ಮುಂದೆ ಅನಿರ್ಧಿಷ್ಟ ಹೋರಾಟ ಮಾಡಲು ಸಭೆ ಸೇರಿ ನಿರ್ಣಯಿಸಲಾಗುವುದು ಎಂದು ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಪತ್ರಿಕೆ ಮೂಲಕ ಎಚ್ಚರಿಕೆ ನೀಡಿದ್ದಾರೆ.

ಕೂಡಲೇ ಜಿಲ್ಲಾಧಿಕಾರಿಗಳು ಸಕ್ಕರೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಲಿಕರು ಹಾಗೂ ರೈತ ಮುಖಂಡರೊಡನೆ ಸಭೆ ಕರೆದು ದರ ನಿಗದಿ ಪಡಿಸಬೇಕು ಇಲ್ಲವಾದಲ್ಲಿ ಮುಂದಿನ ಹೋರಾಟಕ್ಕೆ ನೇರ ಹೊಣೆಗಾರರಾಗುತ್ತಿರಿ.

# ಮುರಿದು ಬಿದ್ದ ಸೇತುವೆ : ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ಸರ್ಕಾರಕ್ಕೆ ಪತ್ರ



**ಕಲಬುರಗಿ** : ನರಿಬೋಳ ಚಾಮನೂರ ಸೇತುವೆ ಕಾಮಗಾರಿ ಕಳಪೆ ಮಟ್ಟದಿಂದ ಕೂಡಿದ್ದು,ಅರೆಬರೆ ಕೆಲಸ ಮಾಡಿ ಕಾಮಗಾರಿ ಬಿಲ್ ಪಡೆದ ಗುತ್ತಿಗೆ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಿ,ಕೂಡಲೇ ಸೇತುವೆ ಕಾಮಗಾರಿ ಪೂರ್ಣಗೊಳಿಸಬೇಕೆಂದು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ ಎಸ್. ಪಾಟೀಲ ನರಿಬೋಳ ರಾಷ್ಟ್ರೀಯ ಹೆದ್ದಾರಿ ಕಾರ್ಯನಿರ್ವಾಹಕ ಅಭಿಯಂತರರಿಗೆ ಒತ್ತಾಯಿಸಿದರು.

ಬ್ರಿಡ್ಜ್ ಕಾಮಗಾರಿ ವಿರುದ್ಧ ದೂರು ಹಿನ್ನೆಲೆಯಲ್ಲಿ ಸ್ಥಳಕ್ಕೆ ಬಂದ ಕಾರ್ಯನಿರ್ವಾಹಕ ಅಭಿಯಂತರರು ಈಗಾಗಲೇ ಗುತ್ತಿಗೆದಾರನ ಅಗ್ರಿಮೆಂಟ್ ರದ್ದುಪಡಿಸಿ,ಸುಮಾರು 6ಕೋಟಿ ರೂಪಾಯಿಗಳನ್ನು ದಂಡ ಹಾಕಿ ಬ್ಲಾಕ್ ಲಿಸ್ಟಿಗೆ ಹಾಕಲು ಸರ್ಕಾರಕ್ಕೆ ಶಿಫಾರಸು ಮಾಡಿದ್ದು,ಈ ಕಾಮಗಾರಿ ಪ್ರಾರಂಭದ ಕುರಿತು 15ದಿನದಲ್ಲಿ ತಿಳಿಸಲಾಗುವುದು ಎಂದರು

ರಸ್ತೆಗಾಗಿ ಜಮೀನು ನೀಡಿರುವ ರೈತರಿಗೆ ಶೀಘ್ರ ಹಣ ಬಿಡುಗಡೆ ಮಾಡಬೇಕು. 15ದಿನದ ಸಮಯಾವಕಾಶ ನೀಡುತ್ತಿದ್ದು,ಒಂದು ವೇಳೆ ಮಾತು ತಪ್ಪಿದರೆ ಸೇತುವೆ ಮೇಲೆ ಅನಿರ್ದಿಷ್ಠಾವಧಿ ಧರಣಿ ಸೇರಿ ಉಗ್ರಹೋರಾಟ ಮಾಡುವುದು ಅನಿವಾರ್ಯ ಎಂದು ನರಿಬೋಳ ಎಚ್ಚರಿಸಿದರು.ಈ ಸಂದರ್ಭದಲ್ಲಿ ಗ್ರಾಮೀಣ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಶ್ರವಣ ಕುಮಾರ ನಾಯಕ ರೈತರು ಅಧಿಕಾರಿಗಳು ಇನ್ನಿತರರಿದ್ದರು

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State